ಅಧ್ಯಕ್ಷರು : ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, "3ನೇ ಜೂನ್ 2013ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಪ್ರಸ್ತಾವದ ಪರವಾಗಿರುವವರು **ಹೌದು** ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು **ಇಲ್ಲ** ಎಂದು ಸೂಚಿಸಬೇಕು

ಪ್ರಸ್ತಾವವು **ಹೌದು** ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು **ಹೌದು** ಎನ್ನುವವರ ಪರವಾಗಿದೆ

ಪ್ರಸ್ತಾವವು **ಹೌದು** ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸಭೆಯ ಅನುಮತಿ ದೊರಕಿದೆ.

ವಂದನಾ ನಿರ್ಣಯವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಈಗ ನೀರಾವರಿ ಸಚಿವರು ನಿನ್ನೆ ಚರ್ಚೆಯಾದಂತಹ ವಿಷಯಕ್ಕೆ ಉತ್ತರವನ್ನು ಹೇಳಬೇಕು.

8. ಶಾಸನ ರಚನೆ : ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಮಕ.2013 (ವಿಧೇಯಕದ ಮುಂದುವರೆದ ಪರ್ಯಾಲೋಚನೆ ಹಾಗೂ ಅಂಗೀಕಾರ)

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕದ ಬಗ್ಗೆ ಚರ್ಚೆ ಮಾಡಿದ್ದೇವೆ. ಚರ್ಚೆ ನಡೆದ ಸಂದರ್ಭದಲ್ಲಿ ಒಂದು ಗ್ರಾಮಸಭೆಯನ್ನು ಕರೆಯದೇ ಹೋದರೆ disqualify ಆಗಬೇಕೆನ್ನುವ provision ಇತ್ತು, ಅದಕ್ಕೆ ಸತತ ಎರಡು ಸಭೆ ಎಂದು ಹೇಳಿ ತಿದ್ದುಪಡಿ ಮಾಡಿದ್ದೇವೆ.

(ಈ ಹಂತದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ವಿಧಾನಸಭೆಯೊಳಗೆ ಆಗಮಿಸಿದರು)

ಶ್ರೀ ಹೆಚ್.ಕೆ. ಪಾಟೀಲ್ :Panchayath Development Officerಗೆ ಸಹ ಜವಾಬ್ದಾರಿಯನ್ನು ಸೂಚಿಸಿದ್ದು, ಒಂದು ವೇಳೆ ನೆರವು ನೀಡಲು ಅಭಿವೃದ್ಧಿ ಅಧಿಕಾರಿಯೂ ವಿಫಲವಾದಲ್ಲಿ ಅಂತಹ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು ಎನ್ನುವ ಪದವನ್ನೂ ಸಹ ಸೇರಿಸಿದ್ದೆವೆ. ಆ ಕಾರಣಕ್ಕೆ ಚುನಾಯಿತ ಪ್ರತಿನಿಧಿ ಹಾಗೂ ಅಧಿಕಾರಿಯನ್ನೂ ಸಹ ಸಂಪೂರ್ಣವಾಗಿ ನಾವು ಈ ಸಂವಿಧಾನದ ಸದಾಶಯವನ್ನು ಅನುಷ್ಠಾನ ಮಾಡುವುದರಲ್ಲಿ ಅವರನ್ನು ಹೊಣೆಗಾರರನ್ನಾಗಿ ಮಾಡುತ್ತೇವೆ. ಒಂದು ವೇಳೆ ವಾರ್ಡ್ ಸಭೆ, ಗ್ರಾಮ ಸಭೆ ನಡೆಯದೇ ಹೋದರೆ ಮೂಲ ಶಕ್ತಿ ಏನಿದೆ, ಯಾವ ಶಕ್ತಿಯಿಂದ ಪಂಚಾಯಿತಿ ಬರುತ್ತದೆ, ಅದೇ defeat ಆದ ಹಾಗೆ ಆಗುತ್ತದೆ. ಆ ಕಾರಣಕ್ಕಾಗಿ ಈ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗೆ ಮಹತ್ವ ಕೊಡತಕ್ಕಂಥ ಕೆಲಸವನ್ನು ಈ ಒಂದು ತಿದ್ದುಪಡಿಯ ಮೂಲಕ ಮಾಡಿದ್ದೇವೆ. ದಯ ಮಾಡಿ ಇದರ ಬಗ್ಗೆ ಏನು ಚರ್ಚೆ ಮಾಡಿದ್ದೆವು, ಆ ಹಿನ್ನೆಲೆಯಲ್ಲಿ ಈ ಎಲ್ಲಾ ಮಾತುಗಳಿವೆ ಎಂದು ಹೇಳಿ, ಇದನ್ನು ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು PDOಗಳಿಗೆ ಜವಾಬ್ದಾರಿಯನ್ನು ಹೊರಿಸಿದ್ದೇವೆಂದು ಏನು ತಿದ್ದುಪಡಿ ಮಾಡಿರುವುದನ್ನು ಹೇಳುತ್ತಿದ್ದಾರೆ, ಅದರ ಕಾಪಿಯನ್ನು ನಮಗೆ ಕೊಟ್ಟಿಲ್ಲ. ಅಂದರೆ ಅವರು ಅಷ್ಟು ತರಾತುರಿ ಇದ್ದಾರೆ. Amended copy ಕೊಡುವುದಕ್ಕೂ ಕೂಡ ಅವರಿಗೆ ಪುರುಸಿತ್ತಿಲ್ಲ. ಈಗ ನಾವು ಹೇಳಿದ ಮೇಲೆ ಅದು ಸಿಗುತ್ತದೆ. ಈ ರೀತಿ ಪರಿಸ್ಥಿತಿ ಇದೆ.

ಅಧ್ಯಕ್ಷರು : ಶೆಟ್ಟರೇ, ನೀವು ಹೊರಗಡೆ ಹೋಗಿದ್ದಿರಿ.

ಶ್ರೀ ಜಗದೀಶ್ ಶೆಟ್ಟರ್ : ಕೊಡುವುದಕ್ಕೆ ಏನು ಆಗುತ್ತದೆ?

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೆ, ನೀವು ಇಲ್ಲಿ ಕುಳಿತು ನಡೆಸಿದ್ದೀರಿ, ಅಲ್ಲಿ ಕುಳಿತು ನಡೆಸಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಬೆಳಿಗ್ಗೆ ವಾದ ಮಾಡಿದ್ದೇನೆ. ಈಗಲೂ ಅದೇ ಮಾತು ಹೇಳುತ್ತಿದ್ದೇನೆ. ಇವತ್ತು ಗ್ರಾಮ ಪಂಚಾಯಿತಿ ಸದಸ್ಯರನ್ನು ಬಲಿಪಶು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಗುಬ್ಬಿ ಮೇಲೆ ಬ್ರಹ್ಮಾಸ್ತ್ರವನ್ನು ಬಿಡುವಂತಹ ಕೆಲಸವನ್ನು ಈ ಸರ್ಕಾರದವರು ಮಾಡುತ್ತಿದ್ದಾರೆ.

ಗ್ರಾಮ ಪಂಚಾಯಿತಿ ಸದಸ್ಯರನ್ನು ಸಭೆ ಕರೆಯದಿದ್ದಾಗ disqualify ಮಾಡುವ ವಿಚಾರವನ್ನು ಹೇಳಿದ್ದಾರೆ. ಇವತ್ತು ಗ್ರಾಮ ಸಭೆ ಮಾಡಬೇಕು, ವಾರ್ಡ್ ಸಭೆ ಮಾಡಬೇಕು, ಸರಿಯಾದಂತಹ ರೀತಿಯಲ್ಲಿ ಫಲಾನುಭವಿಗಳು ಸೆಲೆಕ್ಷನ್ ಆಗಬೇಕು ಎಂದು ಏನಿದೆ, ಅದು regularize ಮಾಡಬೇಕು. ಆ ರೀತಿ ಮಾಡುವಂತಹ ಪ್ರಕ್ರಿಯೆಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಿ. ಅದು ಬಿಟ್ಟು ಗ್ರಾಮ ಪಂಚಾಯತಿ ಸದಸ್ಯರನ್ನು disqualify ಮಾಡುವುದು ಎಂದು ನೀವು ಈಗ ಅಧಿಕಾರ ಕೊಡುತ್ತೀರಿ. ಆದರೆ ಮೊದಲು ಹಿಂದೆ ಇದ್ದಂತಹ ಕಾನೂನಿನಲ್ಲಿ ಯಾರು ಸಭೆಯನ್ನು ಕರೆಯಬೇಕೆನ್ನುವ ಬಗ್ಗೆ ಸ್ಪಷ್ಟತೆ ಇರಲಿಲ್ಲ, silent ಇತ್ತು. ಈಗ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ, ಸದಸ್ಯರಿಗೆ ಆ ಅಧಿಕಾರ ಇದೆ, ಅವರು ಸಭೆಯನ್ನು ಕರೆಯಬೇಕು ಎಂದು ಇದರಲ್ಲೇ amemdment ಮಾಡಿ ತೋರಿಸುತ್ತಾರೆ. ಇದು ಮೂಲ ಕಾನೂನಿನಲ್ಲಿ, ಆ ಒಂದು sectionನಲ್ಲಿ ಇದು ಇಲ್ಲ, silent ಇದೆ. ಹೀಗಾಗಿ ಯಾವ ಅಧಿಕಾರಿಗಳು ಈ ಕೆಲಸವನ್ನು ಮಾಡಬೇಕು, ಆ ಅಧಿಕಾರಿಗಳು ಮೇಲೆ ಈ ಜವಾಬ್ದಾರಿಯನ್ನು ಹೊರಿಸಲಾರದೆ, ಇವತ್ತು ಜನಪ್ರತಿನಿಧಿಗಳ ಮೇಲೆ ಹೊರಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ನಾನು ಬೆಳಿಗ್ಗೆಯೂ ಹೇಳಿದೆ, ಇವರು ಕೆಳ ಹಂತದ ಜನಪ್ರತಿನಿಧಿಗಳು. ಅದು ಮುನಿಸಿಪಲ್ ಇರಬಹುದು, ಕಾರ್ಪೋರೇಷನ್ ಇರಬಹುದು, ಶಾಸಕರಿರಬಹುದು, ಪಾರ್ಲಿಮೆಂಟ್ ಮೆಂಬರ್ಸ್ ಇರಬಹುದು, ನಮ್ಮ ವಿಧಾನಸಬೇ ಇರಬಹುದು, ಮಂತ್ರಿಗಳಿರಬಹುದು. ಇವರ್ಯಾರಿಗೂ ನಾವು ನಮ್ಮ ಜವಾಬ್ದಾರಿಯನ್ನು ಮರೆತು ಕೆಲಸವನ್ನು ಮಾಡದಂತಹ ಸಂದರ್ಭದಲ್ಲಿ disqualify ಆಗುವಂತಹ ಆ ಶಿಕ್ಷೆ ನಮಗಿಲ್ಲ. ಆ ಕಾನೂನು ನಮಗೆ ಅನ್ವಯವಾಗಲ್ಲ. ಆದರೆ ಕೆಳ ಹಂತದಲ್ಲಿ ಯಾರು ಜನಪ್ರತಿನಿಧಿಗಳಿದ್ದಾರೆ, ಅವರಿಗೆ ಇದು ಅನ್ವಯವಾಗುವಂಥದ್ದು, ಇದು ಪ್ರಜಾತಂತ್ರದ ವ್ಯವಸ್ಥೆಗೆ ಮಾರಕ.

ಅಧ್ಯಕ್ಷರು : ನೀವು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇದನ್ನೆಲ್ಲ ಹೇಳಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಆ ಸದಸ್ಯರ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ವ್ಯವಸ್ಥಿತವಾದಂತಹ ಪಿತೂರಿ ಎಂದು ಹೇಳುತ್ತಿದ್ದೇನೆ. ಅದಕ್ಕಾಗಿ ನಾನು

ಬೆಳಿಗ್ಗೆಯೂ ಕೂಡ ಹೇಳಿದ್ದೇನೆ. ಇದನ್ನು withdraw ಮಾಡಿ. ಆಮೇಲೆ ಇದಕ್ಕೆ Joint Select Committee ಮಾಡಿ. ಇವರು ಈ ವಿಚಾರದಲ್ಲಿ prestige ಆಗಿ ತೆಗೆದುಕೊಳ್ಳುವುದು ಬೇಡ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಶೆಟ್ಟರ್‌ರವರೇ, ತಾವು yield ಆಗುವುದಾದರೆ ನಾನು ಹೇಳುವುದೇನೆಂದರೆ ಜನರಿಗೆ ಅಧಿಕಾರ ಕೊಡಿಸುವುದು ಮೊಸವೇ?

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ಇರುವಂತಹ ವ್ಯವಸ್ಥೆಯಲ್ಲಿ ಕೊಡಿಸಿ, ಯಾರು ಬೇಡವೆನ್ನುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಗ್ರಾಮ ಪಂಚಾಯಿತಿ ಸದಸ್ಯನಿಗೆ ಏನು ಅಧಿಕಾರ ಇದೆ, ಅವನಿಗೆ ಯಾರಿಂದ ಅಧಿಕಾರ ಬಂದಿದೆ, ಆ ಜನರಿಗೆ ಅಧಿಕಾರ ಕೊಡಿಸುತ್ತಿದ್ದೇವೆ. ಜನರ ಅಧಿಕಾರವನ್ನು ಕಿತ್ತುಕೊಂಡು ಬೇಕಾದ್ದು ಮಾಡಬಹುದೇ?

ಶ್ರೀ ಕೆ.ಜಿ. ಬೋಪಯ್ಯ : ಕಾರ್ಯದರ್ಶಿ ಮೀಟಿಂಗ್ ಕರೆಯಲಿ. preside ಮಾಡುವುದು ಮಾತ್ರ ಅವರ ಕೆಲಸ.

(ಗೊಂದಲ)

ಅಧ್ಯಕ್ಷರು : ಬೆಳಿಗ್ಗೆ ನೀವೆಲ್ಲ ಹೇಳೀದ್ದೀರಿ. ಪುನಃ ಅದೇ ಭಾಷಣ ಮಾಡುತ್ತಿರೇನು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರು ಸರಿಯಾಗಿ ಜವಾಬ್ದಾರಿ ಮಾಡದಿದ್ದಾಗ ಶಿಸ್ತು ಕ್ರಮ ಕೈಗೊಳ್ಳಿ. ಮಂತ್ರಿಗಳಿಗೆ ಹಕ್ಕಿದೆ, ಅಧಿಕಾರಿಗಳಿಗೆ ಹಕ್ಕಿದೆ? ಇವರು ಹೊಸದಾಗಿ ಏನೂ ಸೇರಿಸಿಲ್ಲ. ಆ ಗ್ರಾಮ ಪಂಚಾಯಿತಿ ಸದಸ್ಯರ ಮೇಲಿರುವಂತಹ disqualify provision ತೆಗೆಯಿರಿ. ಅವರನ್ನು binding ಮಾಡಿ, ಜವಾಬ್ದಾರಿ ಮಾಡಿ. ಆದರೆ, disqualify ಮಾಡುವಂಥದ್ದು ಇದೆಯಲ್ಲಾ, ಇದು ಹಕ್ಕನ್ನು ಮೊಟಕುಗೊಳಿಸುವಂಥದ್ದು ಆಗುತ್ತದೆ. ಅವರು ಇದನ್ನು withdraw ಮಾಡಬೇಕು.

ಅಧ್ಯಕ್ಷರು : ಒಂದು ನಿಮಿಷ, ಮಾನ್ಯ ಮಂತ್ರಿಯವರು ಬೆಳಿಗ್ಗೆ ಪ್ರಸ್ತಾವ ಮಾಡಿದಂಥ ವಿಧೇಯಕಕ್ಕೆ ಈಗ ಕೆಲವು ತಿದ್ದುಪಡಿಯನ್ನು ತಂದಿದ್ದಾರೆ. ಆ ತಿದ್ದುಪಡಿಗೆ ಸಂಬಂಧಪಟ್ಟಂತೆ ಏನಾದರೂ ಮಾತನಾಡುವುದಿದ್ದರೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಆ ತಿದ್ದುಪಡಿಗೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ಈಗ Panchayath Development Officer (PDO), "ಈ ರೀತಿ ನೆರವು ನೀಡಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ವಿಫಲನಾದಲ್ಲಿ ಅಂಥ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು" ಎಂದು ತಿಳಿಸಿದ್ದಾರೆ. ಸರ್ಕಾರಕ್ಕೆ ಶಿಸ್ತು ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆಯಲ್ಲಾ, ಈಗ ಯಾವುದೋ ಒಬ್ಬ PDO, Secretary, EO, ಜಿಲ್ಲಾಪಂಚಾಯತ್‌ನ CEO, ಇವರು ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡದಿದ್ರೆ, ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವ ಬಗ್ಗೆ specific ಆಗಿ ಹೇಳಿ. ಅವರ ಮೇಲೆ penalty ಹಾಕುತ್ತೀರೊ ಅಥವಾ ಅವರನ್ನು dismiss ಮಾಡುತ್ತೀರೊ, ತಾವು ಯಾವ ರೀತಿ Panchayath memberಅನ್ನು disqualify ಮಾಡುತ್ತೀರೋ, ಆ ರೀತಿ ಇವರಿಗೂ ಮಾಡಿ. ನೀವು ಇದನ್ನು ಮಾಡುವುದಕ್ಕೆ ತಯಾರಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಒಬ್ಬ ಅಧಿಕಾರಿಯ ಮೇಲೆ ಶಿಸ್ತು ಕ್ರಮ ಎಂದರೆ, K.C.S.Rules ಇರುವುದು, ಅದು ನಿಮಗೆ ಗೊತ್ತಿಲ್ಲವೇ?

(ಗೊಂದಲ)

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ದಯವಿಟ್ಟು ಈ ತಿದ್ದುಪಡಿಯ ಮೇಲೆ ಮಾತನಾಡುವುದಾದರೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಇಷ್ಟು ಹೊತ್ತು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ಮಾತನಾಡಿ, ಅವರ ಕಡೆಗೆ ಏಕೆ ಕೈ ತೋರಿಸುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ : ಇದರಿಂದ ಏನೂ ಪ್ರಯೋಜನವಿಲ್ಲ, ಇದನ್ನು ತಿದ್ದುಪಡಿ ತಂದರೆ ಏನೂ ಆಗುವುದಿಲ್ಲ. ನಾವು ಬೆಳಗಿನಿಂದಲೂ insist ಮಾಡುತ್ತಿದ್ದೆವೆ. ಪಂಚಾಯತ್ ಸದಸ್ಯರನ್ನು disqualify ಮಾಡುವಂಥ provision ಏನು ಇದೆ, ಅದನ್ನು ದಯವಿಟ್ಟು ತೆಗೆಯಿರಿ, ಇದು ನನ್ನ opinion.

ಅಧ್ಯಕ್ಷರು: ಆಯಿತು, Ok.

ಶ್ರೀ ವೈ.ಎಸ್.ವಿ.ದತ್ತ(ಕಡೂರು): ಮಾನ್ಯ ಅಧ್ಯಕ್ಷರೆ, ಈ ವಿಷಯ ಬೆಳಗಿನಿಂದಲೂ ಇಲ್ಲಿ ಚರ್ಚೆಯಾಗಿದೆ. ನಾನು ಎರಡು ಪಾಯಿಂಟ್‌ಗಳನ್ನು ಹೇಳಿದ್ದೇನೆ. ನಾವು ಸಚಿವರ ಗಮನಕ್ಕೆ ತಂದಿರುವಂಥದ್ದು. ಮೊದಲನೆಯದಾಗಿ, ಸದಸ್ಯರು ವಾರ್ಡ್ ಸಭೆಯನ್ನು ಕರೆಯಲಿಲ್ಲವೆಂದು ತಕ್ಷಣವೇ ಅವರನ್ನು ಅನರ್ಹಗೊಳಿಸುವಂಥದ್ದು ಏನು ಇದೆ, ಅದಕ್ಕೆ ತಾವು ಅವರ ಒಬ್ಬರ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡುತ್ತಿದ್ದೀರಿ, PDOಗಳನ್ನು ವಾರ್ಡ್ ಸಭೆಗೆ, ಗ್ರಾಮ ಸಭೆಗೆ EO ಗಳನ್ನು ಜಂಟಿ ಜವಾಬ್ದಾರಿ ಮಾಡಿ, ಇದರಲ್ಲಿ ಅಧಿಕಾರಿಗಳನ್ನು ಸೇರಿಸಬೇಕೆಂಬುದು ನಿಜ. ತಾವು ಹೇಳಿದ ಹಾಗೆ ನಾವು PDO ಗಳನ್ನು EO ಗಳನ್ನು ಸೇರಿಸಿದ್ದೇವೆಂದು ಈಗ ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಅಧ್ಯಕ್ಷರು : ಇದು ವಾರ್ಡ್ ಸಭೆ.. .

ಶ್ರೀ ವೈ.ಎಸ್.ವಿ.ದತ್ತ : ವಾರ್ಡ್ ಸಭೆ PDO ವ್ಯಾಪ್ತಿಗೆ ಬರುತ್ತದೆ, ಗ್ರಾಮ ಸಭೆ EO ವ್ಯಾಪ್ತಿಗೆ ಬರುತ್ತದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇವೆರಡೂ PDO ಗಳಿಗೆ ಬರುತ್ತದೆ.

ಅಧ್ಯಕ್ಷರು : ಅವರು ಮಾತನಾಡುತ್ತಿದ್ದಾರೆ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, ಈಗ ಇವರು ಹೇಳುತ್ತಿರುವಂಥದ್ದು ಏನೆಂದರೆ, ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರು 6 ತಿಂಗಳಲ್ಲಿ ಸಭೆ ಕರೆಯಲಿಲ್ಲವೆಂದರೆ ಅವರನ್ನು ಪೂರ್ಣವಾಗಿ disqualify ಮಾಡುತ್ತೇವೆಂದು ಹೇಳುತ್ತಾರೆ, ಅಧಿಕಾರಿಗಳ ಮೇಲೆ ಮಾತ್ರ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ, ಇದು ಖಂಡಿತವಾಗಿಯೂ ಜನತಂತ್ರಕ್ಕೆ ಬಗೆಯುವ ದೊಡ್ಡ ಅಪಚಾರವಾಗುತ್ತದೆ, ಏಕೆಂದರೆ, ಜನತಂತ್ರದ ವ್ಯವಸ್ಥೆಯಲ್ಲಿ ಪರಮಾಧಿಕಾರವನ್ನು ತಂದಿದ್ದೇವೆಂದು ಹೇಳಿದರೆ, ಅದು ಶುದ್ಧ ವಿಪರ್ಯಾಸ, ಕ್ರೂರ ವ್ಯಂಗ್ಯ. ಏಕೆಂದರೆ, ನೀವು ಪರಮಾಧಿಕಾರ ಕೊಟ್ಟರೆ, ತಪ್ಪು ಮಾಡಿದರೆ ಜನತಂತ್ರದ ವ್ಯವಸ್ಥೆಯಲ್ಲಿ ಶಿಕ್ಷೆಯನ್ನು ಕೊಡುವುದಕ್ಕೆ ಜನರು ಇದ್ದಾರೆ. ಅವರು ಮತ್ತೆ 5 ವರ್ಷಗಳಿಗೆ ಜನಗಳ ಹತ್ತಿರ ಹೋಗುತ್ತಾರೆ. ಅವರು ಕೆಟ್ಟ ಕೆಲಸವನ್ನು ಮಾಡಿದ್ದಾರೆ,

ಅವನನ್ನು ಜನರು ಹೊರಗೆ ಹಾಕುತ್ತಾರೆ. ಅದು ಅವರಿಗೆ ಇರುವಂಥದ್ದು, ಜನರ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ನಿಮಗೆ ಏನು ಹಕ್ಕು ಇದೆ? ಅವರನ್ನು disqualify ಮಾಡುವುದಕ್ಕೆ ನಿಮಗೆ ಯಾವ ಹಕ್ಕು ಇದೆ? ಅವನು ಇನ್ನೊಂದು ಸಾರಿ ಜನರ ಹತ್ತಿರ ಹೋಗಬೇಕು. ಅದರೆ ಅಧಿಕಾರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದೆಂದರೆ ಅವರನ್ನು suspend ಮಾಡಬಹುದು, ಅಬ್ಬಬ್ಬಾ ಎಂದರೆ ಇನ್ನೊಂದು ಕಡೆಗೆ ವರ್ಗಾವಣೆಯನ್ನು ಮಾಡಬಹುದು. ಆಮೇಲೆ ಪುನಃ reinstate ಮಾಡಬಹುದು. ತಮ್ಮ ಸರ್ಕಾರ ಜನರಿಗೆ ಅಧಿಕಾರ ಕೊಡುತ್ತೇವೆಂದು, ಜನಪ್ರತಿನಿಧಿಗಳಿಗೆ ಅಧಿಕಾರ ಕೊಡುತ್ತೇವೆಂದು ಹೇಳುವ ನೆಪದಲ್ಲಿ ಜನ ಪ್ರತಿನಿಧಿಗಳ ಹಕ್ಕನ್ನೆ ಕಸಿದುಕೊಳ್ಳುತ್ತಿದ್ದೀರಿ, ಅಧಿಕಾರಿಗಳ ಕೈಯನ್ನು ಬಲಪಡಿಸುತ್ತಿದ್ದೀರಿ. ಆದ್ದರಿಂದ ಇದು ದೊಡ್ಡ ವ್ಯಂಗ್ಯ, ಇದು ಜನತೆಗೆ ಅಧಿಕಾರವಲ್ಲ, ಅಧಿಕಾರಿಗಳ ಕೈ ಬಲಪಡಿಸುತ್ತಿದ್ದೀರಿ. ಆನತಾ ಪ್ರತಿನಿಧಿಗಳಿಗೆ ಹೆದರಿಸಿ, ಧಮಕಿ ಹಾಕುತ್ತಿದ್ದೀರಿ, ಆದ್ದರಿಂದ ಜನತಾ ಪ್ರತಿನಿಧಿಗಳಿಗೆ ಧುಮಕಿ ಹಾಕುವಂಥ ಈ ಕಾನೂನು Draconian ಆಗಿದೆ.

ಅಧ್ಯಕ್ಷರು: ಸಾಕು.

ಡಾ:ಕೆ.ಸುಧಾಕರ್(ಚಿಕ್ಕಬಳ್ಳಾಪುರ): ಮಾನ್ಯ ಅಧ್ಯಕ್ಷರೆ, ಇವತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣ ನೀತಿಯ ವಿರುದ್ಧವಾಗಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಇರಬಹುದು, ಸದಸ್ಯರಿರಬಹುದು, ಇವರನ್ನು ಅನರ್ಹಗೊಳಿಸುವಂಥ ನಿಟ್ಟಿನಲ್ಲಿ ಸರ್ಕಾರ ಈ ವಿಧೇಯಕವನ್ನು ಮಂಡಿಸಿದೆ. ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ, ನಾನು ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಇವತ್ತು ಒಂದು ಗ್ರಾಮ ಪಂಚಾಯಿತಿ ಎಂದರೆ, ಅಲ್ಲಿ ಒಬ್ಬ Secretary ಇರುತ್ತಾರೆ, PDO ಇರುತ್ತಾರೆ, ಮತ್ತೆ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ EO ಇರುತ್ತಾರೆ, ಇಡೀ ಜಿಲ್ಲೆಗೆ ಸಂಬಂಧಪಟ್ಟಂತೆ CEO ಇರುತ್ತಾರೆ. ಇದರ ಜೊತೆ ಜೊತೆಯಲ್ಲೆ Nodal Officer ಎಂದು ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳನ್ನು ಕೂಡ ಗ್ರಾಮ ಪಂಚಾಯತಿಗಳಲ್ಲಿ ನೇಮಕ ಮಾಡಿರುತ್ತಾರೆ. ಹಾಗಾಗಿ ನಾನು ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಅಧ್ಯಕ್ಷರನ್ನು ಕೇವಲ ವಾರ್ಡ್ ಸಭೆ ಕರೆಯಲಿಲ್ಲವೆಂಬ ಒಂದೇ ಒಂದು ಉದ್ದೇಶಕ್ಕೆ ಅನರ್ಹ

ಗೊಳಿಸುವಂಥ ತಿದ್ದುಪಡಿಯನ್ನು ತರುವುದಕ್ಕೆ ತಾವು ಹೊರಟಿರುವಂಥದ್ದು, ನಿಜವಾಗಿಯೂ ಇದು ಪ್ರಜಾತಂತ್ರದ ವ್ಯವಸ್ಥೆಗೆ ವಿರುದ್ಧವಾಗಿದೆ. ಹಾಗಾಗಿ ನಿಮ್ಮ ಅಧೀನದಲ್ಲಿರುವಂಥ ಅಧಿಕಾರಿಗಳಿಗೆ ನೀವು ಏಕೆ ಸೂಚನೆಯನ್ನು ಕೊಡಬಾರದು? ಆ ಅಧಿಕಾರಿಗಳಿಗೆ ಲಗಾಮು ಹಾಕಿ ವಾರ್ಡ್ ಸಭೆಗಳನ್ನು ಮಾಡಿಸುವಂಥ ನಿಟ್ಟಿನಲ್ಲಿ ಏಕೆ ಕಾರ್ಯೋನ್ಮುಖರಾಗಬಾರದೆನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಪಂಚಾಯತ್‌ರಾಜ್ ಸಚಿವರು ತಂದಿರುವಂಥ ವಿಧೇಯಕ, ಒಂದು ದೃಷ್ಟಿಯಲ್ಲಿ ಸ್ವಾಗತಾರ್ಹ, ಏಕೆಂದರೆ, ಗ್ರಾಮ ಪಂಚಾಯತಿಗಳು ಬಹಳ ವಿಫಲವಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ವಾರ್ಡ್ ಸಭೆಗಳನ್ನು ಮಾಡುವುದಿಲ್ಲ, ಗ್ರಾಮ ಸಭೆಗಳನ್ನು ಮಾಡುವುದಿಲ್ಲ. ಮತ್ತೆ ಅವರು ಏನು ಬದಲಾವಣೆಯನ್ನು ಭಾರೀ ಪ್ರಮಾಣದಲ್ಲಿ ಮಾಡಬೇಕೆಂದು ತರುತ್ತಿದ್ದಾರೆ, ಸಂತೋಷ. ಆದರೆ, ನಾವು ಗ್ರಾಮ ಪಂಚಾಯಿತಿ ಸದಸ್ಯರಿಗೆ ಮೀಸಲಾತಿಯನ್ನು ಕೊಟ್ಟಿದ್ದೇವೆ. ನನ್ನ ಒಂದು ಕ್ಷೇತ್ರದಲ್ಲೇ ಸುಮಾರು 150 ಜನ ಗ್ರಾಮ ಪಂಚಾಯಿತಿಯ ಸದಸ್ಯರು ಬೆಂಗಳೂರಿನಲ್ಲಿ ಕೂಲಿ ಮಾಡುತ್ತಿದ್ದಾರೆ. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಅವರಿಗೆ date ಗೊತ್ತಾಗಿ ಬಂದು ಗ್ರಾಮ ಸಭೆಯನ್ನು ಕರೆಯುವಂಥ ಶಕ್ತಿ ಇದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಇದರ ಜೊತೆಗೆ ಗ್ರಾಮ ಸಭೆಯನ್ನು ಗ್ರಾಮ ಸಭೆಯ ಅಧ್ಯಕ್ಷರು ಕರೆಯಬೇಕು. ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತಿ ಸಭೆಗಳಿಗೆ ನಾವೆಲ್ಲರೂ ಭಾಗವಹಿಸುತ್ತೇವೆ. ಅವರು ನಮ್ಮನ್ನು ಕರೆಯದೇ ಇದ್ದರೂ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ 6 ತಿಂಗಳಿಗೆ ಒಂದು ಸಭೆ ಕಡ್ಡಾಯವಾಗಿ ಆಗುತ್ತದೆ. ಅದು ಯಾವ ಮಟ್ಟದಲ್ಲಿ ಆಗುತ್ತದೆ, ಯಾವ ಪ್ರಮಾಣದಲ್ಲಿ ಆಗುತ್ತದೆ, ಎಷ್ಟು ಜನ ಸೇರುತ್ತಾರೆಂಬುದು ಮುಖ್ಯವಲ್ಲ. ಈಗ ಗ್ರಾಮ ಪಂಚಾಯತಿಯ ವಾರ್ಡ್ ಸಭೆಗೆ ಆ ಭಾಗದ ಗ್ರಾಮ ಪಂಚಾಯತಿಯ ಸದಸ್ಯ ಅಧ್ಯಕ್ಷತೆಯನ್ನು ವಹಿಸಬೇಕೆಂದು ಈಗಲೂ resolution ಆಗುತ್ತದೆ. ವಾರ್ಡ್ ಸಭೆಯನ್ನು PDO ಇಲ್ಲವೇ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹೋಗಿ ಆ ಊರಿನಲ್ಲಿ ಕುಳಿತು ಅಲ್ಲಿ ಏನೇನು ಕೆಲಸವಾಗಬೇಕೆಂಬುದನ್ನು ಈಗಲೂ ಬರೆದುಕೊಂಡು ಬರುತ್ತಿದ್ದಾರೆ. ಆದರೆ ಸಭೆಗಳು ನಡೆಯುವುದಿಲ್ಲ, ಇವರು ಬರೆದುಕೊಂಡು

ಬರುತ್ತಾರೆ. ಆದರೆ ಇಂಥ ಒಂದು ಸಂದರ್ಭದಲ್ಲಿ ತಾವು ಈಗ ವಿದೇಯಕವನ್ನು ತಿದ್ದುಪಡಿಗೆ ತಂದಿದ್ದೀರಿ. ಅದರಲ್ಲಿ ಒಂದು ವೇಳೆ ಕ್ರಾಂತಿಕಾರಕವಾದಂಥ ಬದಲಾವಣೆಯನ್ನು ಮಾಡಿ, ಪಂಚಾಯತಿಗಳಲ್ಲಿ ಒಂದು ಬದಲಾವಣೆಯನ್ನು ತರಬೇಕೆಂದು ಏನು ಇದ್ದೀರಿ, ಇದು ಬಹಳ ಮಟ್ಟಿಗೆ ನಿಂತು ಹೋಗಿದೆ, ಅದು ನಿದ್ರೆ ಮಾಡುತ್ತಿದೆ. ತಮಗೆ ಅದನ್ನು ತರಬೇಕೆಂಬ ಭಾವನೆ ಇದ್ದರೆ ಗ್ರಾಮ ಪಂಚಾಯಿತಿಗಳಲ್ಲಿ PDOಗಳನ್ನು ಜವಾಬ್ದಾರಿಯುತವಾದ ಸ್ಥಾನದಲ್ಲಿ ನೇಮಿಸಿದ್ದೀರಿ. ತಾವು ಅವರಿಗೆ ಕಾನೂನು ಚೌಕಟ್ಟಿನಲ್ಲಿ ಶಿಕ್ಷೆ ಕೊಡುವುದಕ್ಕೆ ಬರುವುದಿಲ್ಲವೆಂದರೆ, ಇನ್ನು 5 ವರ್ಷಗಳಲ್ಲಿ ನಮ್ಮ ಪ್ರಜಾಪ್ರಭುತ್ವದಲ್ಲಿ ನಾವು ಗೆದ್ದಿರುವಂಥವರಿಗೆ ನಾವೇ ಶಿಕ್ಷೆ ಕೊಟ್ಟುಕೊಳ್ಳುವುದೇ? ಒಂದು ವೇಳೆ ಅವನಿಗೆ date ಗೊತ್ತಾಗಲಿಲ್ಲ, ಸಭೆಯನ್ನು ಕರೆಯುವುದಕ್ಕೆ ಆಗಲಿಲ್ಲವೆಂದು ಅವನನ್ನು ಅನರ್ಹಗೊಳಿಸಿ ಬಿಟ್ಟರೆ ಒಳ್ಳೆಯದಾಗುತ್ತದೆಯೇ? ಆ ರೀತಿ ಏನಾದರೂ ಮಾಡಿದರೆ PDOಗೂ ಶಿಕ್ಷೆ ಎಂದರೆ dismiss ಮಾಡುತ್ತೀರಾ, ಇಲ್ಲವೆಂದರೆ ಅವನನ್ನು ಕೆಲಸದಿಂದ ತೆಗೆದುಹಾಕುತ್ತೀರಾ? ಆ ರೀತಿ ಕಾನೂನನ್ನು ತೆಗೆದುಕೊಂಡು ಬನ್ನಿ. ಆಗ ಸದಸ್ಯ ಅವನ ಮನೆ ಬಾಗಿಲಿಗೆ ಹೋಗಿ ಎಳೆದುಕೊಂಡು ಬಂದು ವಾರ್ಡ್ ಸಭೆ ಮಾಡು ಎಂದು ಹೇಳಿ ಮಾಡಿಸುತ್ತಾನೆ. ಗ್ರಾಮ ಸಭೆಗಳಿಗೆ EOಗಳನ್ನು ಜವಾಬ್ದಾರರನ್ನಾಗಿ ಮಾಡಿ, ಸಭೆಯನ್ನು ಕಡ್ಡಾಯವಾಗಿ ಮಾಡಬೇಕು, ಇದಕ್ಕೆ ಎಂ.ಎಲ್.ಎ.ಗಳನ್ನು ಕರೆಯಬೇಕು, ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಕರೆಯಬೇಕು. ತಾವು ಗ್ರಾಮ ಸಭೆಯ video ತೆಗೆಸುತ್ತೇವೆಂದು ಹೇಳಿದ್ದೀರಿ, ನಾನು ಕುಳಿತು video ಮುಖಾಂತರ ನೋಡುತ್ತೇನೆ. ಆ video ಮುಖಾಂತರ ಸಭೆಯಲ್ಲಿ ಎಷ್ಟು ಜನ ಸದಸ್ಯರು ಸೇರುತ್ತಾರೆ, ಈ ಕಾನೂನನ್ನು ಬಹಳ ಜವಾಬ್ದಾರಿಯುತವಾಗಿ ತಂದಿದ್ದಾರೆ. ನಾವೆಲ್ಲರೂ ವಿಧಾನಸಭೆಗೆ ಬಂದು ಮಾತನಾಡಿದರೆ, ಪ್ರತಿಯೊಬ್ಬ ಮತದಾರರು ಯಾರಿದ್ದಾರೆ, ಅವರೆಲ್ಲರೂ ಗ್ರಾಮಸಭೇಯ ಸದಸ್ಯರಾಗಿರುತ್ತಾರೆ, ಅವರು ಅಲ್ಲಿ ಇದ್ದು ತಮ್ಮ ಹಕ್ಕನ್ನು ಚಲಾಯಿಸಬಹುದು.

ತನ ಜವಾಬ್ದಾರಿಯುತವಾದ ಹಕ್ಕು ಏನಿದೆ, ಸರ್ಕಾರದಿಂದ ಏನು ಬರುತ್ತದೆ, ಯಾವ ಯಾವ ಭಾಗದಲ್ಲಿ ಏನು ಬಂದಿದೆ, ಯಾವ ಯಾವ ಕ್ಷೇತ್ರದಲ್ಲಿ ಏನೇನು ಬಂದಿದೆ, ಅದು ನನ್ನ ಹಾಕ್ಕು, ನನಗೆ ಕೊಡಿ ಎಂದು ಗ್ರಾಮ

ಸಭೆಯಲ್ಲಿ ಎದ್ದುನಿಂತು ಕೇಳಬಹುದು, ಸಂಸ್ಥೆಗಳನ್ನು ಚರ್ಚೆ ಮಾಡಬಹುದು. ನಾವು ವಿಧಾನಸಭೆಯಲ್ಲಿ ಮಾಡುವುದನ್ನು ಅವರು ಗ್ರಾಮ ಸಭೆಯಲ್ಲಿ ಮಾಡಬಹುದು. ಕಾನೂನು ತಂದು ವಾರ್ಡ್ ಮಟ್ಟದಲ್ಲಿ E.O.ಅನ್ನು ಜವಾಬ್ದಾರರನ್ನಾಗಿ, ಮಾಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ P.D.O. ಅಥವಾ ಕಾರ್ಯದರ್ಶಿಯನ್ನು ಜವಾಬ್ದಾರರನ್ನಾಗಿ, ಮಾಡಿ ಗ್ರಾಮ ಪಂಚಾಯಿತಿಗಳಲ್ಲಿ ಇನ್ನೊಂದು ಏನಾಗಿದೆ ಎಂದರೆ, ಗ್ರಾಮ ಪಂಚಾಯತಿಗೆ P.D.O.ಗಳನ್ನು ಹಾಕಿದ್ದೀರಿ. ಈಗ ಯಾರೂ P.D.O.ಗಳೇ ಬರುತ್ತಿಲ್ಲ. 20 ಜನ P.D.O.ಗಳಿದ್ದಾರೆ. ಹಿಂದೆ ಇದ್ದ ಸರ್ಕಾರಕ್ಕೆ ಬೇಜಾರಾದರೂ ಪರವಾಗಿಲ್ಲ ಹೇಳುತ್ತೇನೆ, ಗ್ರಾಮ ಪಂಚಾಯಿತಿಗೆ ಅಧಿಕಾರ ಕೊಡಬೇಕೆಂದು ನಜೀರ್ ಸಾಬ್ ಸಾಹೇಬರು ಎಲ್ಲರೂ ಸೇರಿ ತಂದಂಥ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಇತ್ತು ಇರುವ ಎಆಲ್ಲಾ ಅಧಿಕಾರವನ್ನು ಈಗ ಬೆಂಗಳೂರಿಗೆ ತೆಗೆದುಕೊಂಡು ಬಂದಿದ್ದಾರೆ. ಅಧಿಕಾರ ಜಿಲ್ಲಾ ಪಂಚಾಯಿತಿಯಲ್ಲೂ ಇಲ್ಲ, ತಾಲ್ಲೂಕು ಪಂಚಾಯಿತಿಯಲ್ಲೂ ಇಲ್ಲ. ಗ್ರಾಮ ಪಂಚಾಯಿತಿಗೆ 8 ಲಕ್ಷ ರೂಪಾಯಿಗಳ ಅನುದಾನ ಕೊಡುತ್ತೀರಿ, ಅದರಲ್ಲಿ 6 ಲಕ್ಷ ರೂಪಾಯಿ book adjustment ಆಗುತ್ತದೆ. ಸ್ಟ್ರೀಟ್ ಲೈಟ್ ಚಾರ್ಜಿಗೆಂದು ಹಿಂದುಗಡೆಯಿಂದ KEBಗೆ ಮುರಿದುಕೊಳ್ಳುತ್ತಾರೆ. ಇನ್ನುಳಿದ 2 ಲಕ್ಷ ರೂಪಾಯಿಗಳಲ್ಲಿ ಯಾರಿಗೆ ಸಂಬಳ ಕೊಡುತ್ತಾರೆ? ಇವತ್ತು ಗ್ರಾಮ ಪಂಚಾಯಿತಿಗಳ ಪರಿಸ್ಥಿತಿ ಏನಾಗಿದೆ ಎಂದು ಗೊತ್ತೇ? N.R.E.G. Works ಬರದೇ ಇದ್ದರೆ ಇವತ್ತು ಗ್ರಾಮ ಪಂಚಾಯಿತಿ ಸದಸ್ಯರೆಲ್ಲರೂ ರಾಜೀನಾಮೆ ಕೊಟ್ಟಿರುತ್ತಿದ್ದರು. ಒಬ್ಬರೂ ಇರುತ್ತಿರಲಿಲ್ಲ. ಅಂಥ ಪರಿಸ್ಥಿತಿ ಇದೆ. ಬಹಳ ಕ್ರಾಂತಿಕಾರಕ ಬದಲಾವಣೆ ತರಬೇಕು ಎಂದು ನೀವು ಚಿಂತನೆ ಮಾಡಿ ಇದನ್ನು ತಂದಿದ್ದೀರಿ, ಸಂತೋಷ. ನಾನು ನಿಮ್ಮನ್ನು ಟೀಕೆ ಮಾಡುವುದಿಲ್ಲ. ಒಂದು ಉದಾಹರಣೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲೇ ಅಕೌಂಟ್ಸ್ ಕೊಟ್ಟಿಲ್ಲ ಎಂದು ಹೇಳಿ ತಾಲ್ಲೂಕು ಪಂಚಾಯಿತಿ ಮೆಂಬರ್ ಅನ್ನು ಇವತ್ತು ಅನರ್ಹಗೊಳಿಸಿದ್ದಾರೆ. ಅದು ಅವನಿಗೆ ಗೊತ್ತೇ ಇಲ್ಲ. ಆ ಸದಸ್ಯ ಜೋರಾಗಿ ಮಾತನಾಡುತ್ತಿದ್ದರು ಎಂದು ಹೇಳಿ E.O. ಅವನಿಗೆ ಆ ನೋಟಿಸನ್ನೇ ಕೊಟ್ಟಿಲ್ಲ. ಆ ನೋಟೀಸನ್ನು ಕೊಡದೆ ಅವನು ಅಕೌಂಟ್ಸ್ ಕೊಟ್ಟಿಲ್ಲ. ಇವತ್ತು ಅವನನ್ನು disqualify ಮಾಡಿದ್ದಾರೆ. ಇಂಥ ಪರಿಸ್ಥತಿ ಇದೆ.

ಆದ್ದರಿಂದ ಮಾಡುವುದಾದರೆ ದಯವಿಟ್ಟು P.D.O.ಅನ್ನೂ responsible ಮಾಡಿ, E.O.ಅನ್ನೂ responsible ಮಾಡಿ, ಆಗ ಮಾತ್ರ ಅವರು ಮೆಂಬರ್‌ಗಳನ್ನು ಕರೆದುಕೊಂಡು ಬಂದು ಗ್ರಾಮಸಭೆಯನ್ನೂ ನಡೆಸುತ್ತಾರೆ, ವಾರ್ಡ್ ಸಭೆಯನ್ನೂ ನಡೆಸುತ್ತಾರೆ, ಎಲ್ಲವೂ ಸುಸೂತ್ರವಾಗಿ ನಡೆಯುತ್ತವೆ. ಇದು ನಿಜವಾಗಲೂ ನಡೆಯಬೇಕಾಗಿರತಕ್ಕಂಥ ಕೆಲಸ. ಆಗ ಸದಸ್ಯನೂ ಸಭೆಗೆ ಹೋಗುತ್ತಾನೆ. ಮೂರು ಜನರೂ ಒಟ್ಟಿಗೆ ಸೇರಿ ನಿಜವಾಗಿಯೂ ನಿಮ್ಮ ಕನಸನ್ನು ನನಸು ಮಾಡುತ್ತಾರೆ. ಆ ರೀತಿ ಮಾಡತಕ್ಕಂಥದ್ದು ಸೂಕ್ತ.

ಶ್ರೀ ಸಿ.ಎನ್.ಬಾಲಕೃಷ್ಣ (ಶ್ರವಣಬೆಳಗೊಳ): ಮಾನ್ಯ ಸಭಾಧ್ಯಕ್ಷರೆ ಪಂಚಾಯತ್ ರಾಜ್ ವ್ಯವಸ್ಥೆಯ ತಿದ್ದುಪಡಿ ವಿಧೇಯಕವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಂಡಿಸಿರತಕ್ಕ ವಿಚಾರಲ್ಲಿ ಈಗಾಗಲೇ ಅನೇಕ ಹಿರಿಯ ವಿಧಾನಸಭೆಗೆ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಯಾವುದೇ ಒಬ್ಬ ಗ್ರಾಮ ಪಂಚಾಯತಿ ಸದಸ್ಯ ವಾರ್ಡ್ ಸಭೆಗೆ ಭಾಗವಹಿಸದೇ ಇರುವಂಥ ಸಂದರ್ಭದಲ್ಲಿ ಅವನನ್ನು ಅನರ್ಹಗೊಳಿಸಬಹುದು ಎನ್ನುವ ವಿಚಾರದಲ್ಲಿ ಈಗಾಗಲೇ ಚರ್ಚೆಯಾಗಿದೆ. ಏಕೆಂದರೆ ತುಂಬಾ ಗ್ರಾಮ ಪಂಚಾಯಿತಿ ಸದಸ್ಯರುಗಳು ಹೆಬ್ಬೆಟ್ಟು ಹಾಕುವಂಥವರು ಇದ್ದಾರೆ, ಓದು ಬರಹ ತಿಳಿಯದೇ ಇರುವಂಥವರು ಇದ್ದಾರೆ. ಒಬ್ಬ ಗ್ರಾಮ ಪಂಚಾಯಿತಿ ಸದಸ್ಯ ವಾರ್ಡ್ ಸಭೆಗೆ ಭಾಗವಹಿಸಿದರೂ ಕೂಡ ಭಾಗವಹಿಸಿಲ್ಲ ಎಂದು ರಿಪೋರ್ಟ್ ಕೊಟ್ಟು ದುರುದ್ದೇಶದಿಂದ ಅನರ್ಹಗೊಳಿಸಿದರೆ, ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಲ್ಲವೇ ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಕೆಲವು ಗ್ರಾಮ ಪಂಚಾಯಿತಿ ಸದಸ್ಯರುಗಳನ್ನು ಸಹಿ ಹಾಕುವ ಸಂದರ್ಭದಲ್ಲಿ P.D.O.ಗಳು ಹಾಗೂ ಸೆಕ್ರೆಟರಿಗಳು ಕಷ್ಟದ ಪರಿಸ್ಥಿಗೆ ಅವರನ್ನು ಎಳೆಯುತ್ತಾರೆ. ಆದ್ದರಿಂದ ಈ ತಿದ್ದುಪಡಿಯನ್ನು ತರುವುದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸುವುದಕ್ಕೆ ಆಗುತ್ತದೆಯೇ ಎನ್ನುವಂಥದ್ದನ್ನು ತಾವು ನೆನಪಿನಲ್ಲಿಟ್ಟುಕೊಂಡು ಇದರ ಬಗ್ಗೆ ಗಮನ ಹರಿಸಬೇಕು. ಹಿಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ 13ನೇ ಹಣಕಾಸಿನ ಯೋಜನೆ ಅಡಿಯಲ್ಲಿ ಕುಡಿಯುವ ನೀರಿನ ನಿರ್ವಹಣೆಗೆ ಅವಕಾಶ ಮಾಡಿಕೊಡಲಾಗಿತ್ತು. ಇತ್ತೀಚಿನ ಸುತ್ತೋಲೆ ಪ್ರಕಾರ . . .

ಅಧ್ಯಕ್ಷರು : ಈ ವಿಷಯವನ್ನು ಬಿಟ್ಟು ಅದಕ್ಕೆ ಹೋಗಬೇಡಿ.

ಶ್ರೀ ಸಿ.ಎನ್.ಬಾಲಕೃಷ್ಣ : ಅದನ್ನು ಕೂಡ ಮಾಡಿಕೊಡಿ ಎಂದು ಮನವಿ ಮಾಡುತ್ತೇವೆ. ದಯಮಾಡಿ ಗೌರವಾನ್ವಿತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಿರಿಯರಾಗಿರುವುದರಿಂದ ಮತ್ತೊಮ್ಮೆ ತಿದ್ದುಪಡಿಯನ್ನು ಪರಿಶೀಲನೆ ಮಾಡಿ, ನಂತರ ಇದರ ಮಂಡನೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರ ಮೂಲಕ ಮನವಿ ಮಾಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ) : ಮಾನ್ಯ ಅಧ್ಯಕ್ಷರೇ, ಕೇರಳದಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ಬಹಳ ಚೆನ್ನಾಗಿದೆ. ಅಲ್ಲಿ ಗ್ರಾಮ ಪಂಚಾಯತಿಗಳು ಅತ್ಯುತ್ತಮವಾದ ರೀತಿಯಲ್ಲಿ ಕೆಲಸವನ್ನು ಮಾಡುತ್ತಿವೆ. ಬಹಳ ಮಾದರಿಯಾದಂಥ ಆಡಳಿತ ನಡೆಯುತ್ತಿದೆ. ನಾನು ಶಾಸಕನಾಗಿ ಅಲ್ಲಿಯ ವ್ಯವಸ್ಥೆಯನ್ನು ಪ್ರತ್ಯಕ್ಷವಾಗಿ ನೋಡುವುದಕ್ಕೆ ಎಂದು ಅಲ್ಲಿಗೆ ಹೋಗಿದ್ದೆ. ಅಲ್ಲಿ ಗ್ರಾಮಸಭೆಗಳು ಬಹಳ ಅತ್ಯುತ್ತಮವಾದ ರೀತಿಯಲ್ಲಿ ನಡೆಯುತ್ತಿವೆ.

ಅಧ್ಯಕ್ಷರು : ಅಲ್ಲಿ ಏನಾದರೂ ನಡೆಯಲಿ, ಇದರ ಬಗ್ಗೆ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇರಳದಲ್ಲಿ ಯಾವ ಸದಸ್ಯನನ್ನೂ disqualify ಮಾಡುವುದರ ಮೂಲಕ ಗ್ರಾಮಸಭೆಗಳನ್ನು ಚೆನ್ನಾಗಿ ಮಾಡುವುದಕ್ಕೆ ಮಾಡುತ್ತಿಲ್ಲ. ಈ ವ್ಯವಸ್ಥೆಯಲ್ಲಿ ಅದಕ್ಕೆ ಬೇಕಾದ ಯಾವ ಒಂದು ಜಾಗೃತಿಯನ್ನು ಮೂಡಿಸಬೇಕೋ, ಅದನ್ನು ಮಾಡಬೇಕಾದ ಅಗತ್ಯ ಇದೆ. ಹಾಗಾಗಿ ಈ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾಗಿರುವಂಥ ಒಬ್ಬ ಜನಪ್ರತಿನಿಧಿಯನ್ನು disqualify ಮಾಡುವುದರ ಮೂಲಕ ಮತ್ತು ಅಧಿಕಾರಿಶಾಹಿ ವ್ಯವಸ್ಥೆಯನ್ನು ಬಲಪಡಿಸುವುದರ ಮೂಲಕ ಸರ್ಕಾರ ತರಾತುರಿಯಲ್ಲಿ ಮಾಡುತ್ತಿರುವ ನಿರ್ಣಯವನ್ನು ನಾವು ವಿರೋಧಿಸಬೇಕು. ಇದರ ಬಗ್ಗೆ ವಿಸ್ತೃತವಾದ ಚರ್ಚೆ ಆಗಲಿ. ಯಾವ ಯಾವ ರಾಜ್ಯದಲ್ಲಿ ಏನಿದೆ, ಛತ್ತೀಸ್‌ಗಡದಲ್ಲಿ ಯಾವ ರೀತಿಯಿದೆ ಎಂದು ಹೇಳಿದ್ದಾರೆ, ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿಯಿದೆ ಎನ್ನುವುದರ ವಿವರವನ್ನು ನಾವು ತರಿಸುತ್ತಿದ್ದೇವೆ, ಅವರೂ ತರಿಸಿಕೊಳ್ಳಲಿ. ಅಲ್ಲಿ ಯಾವ ರೀತಿ ಎಂದು ಚರ್ಚೆ ಮಾಡೋಣ, ಈ ರೀತಿ ಏಕಾಏಕಿ, ಗ್ರಾಮಸಭೆಗಳ ಒಂದರ ಬಗ್ಗೆ ಮಾತ್ರ ತಿದ್ದುಪಡಿ ತರುವುದು ತರಾತುರಿ ಆಗುತ್ತದೆ ಸಮಗ್ರವಾದ ತಿದ್ದುಪಡಿಯನ್ನು

ತರುವುದರ ಮೂಲಕ ಸರ್ಕಾರ ಈ ವ್ಯವಸ್ಥೆ ಬಗ್ಗೆ ಇರುವ ಕಾಳಜಿಯನ್ನು ಜಾಸ್ತಿ ತೋರಿಸಬೇಕು ಎಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಪಂಚಾಯತ್ ರಾಜ್ ಸಚಿವರು ತಂದಿರತಕ್ಕಂಥ ಈ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕಕ್ಕೆ ಬೆಳಿಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ನಾವು ಹೇಳಿದ್ದೇವೆ. ವಾರ್ಡ್ ಸಭೆಗಳು ಮತ್ತು ಗ್ರಾಮ ಸಭೆಗಳನ್ನು ಮಾಡುವ ಸಂದರ್ಭದಲ್ಲಿ ಆ ಭಾಗದ ಸದಸ್ಯ ಇದನ್ನೂ ಕರೆಯಬೇಕು, ಕರೆಯದೇ ಹೋದರೆ ಅವನನ್ನು ಅಮಾನತ್ತಿನಲ್ಲಿ ಇಡತಕ್ಕ ಒಂದು ವಿಷಯವನ್ನು ಹೇಳಿದ್ದಾರೆ.

ಅಧ್ಯಕ್ಷರು: ಅಮಾನತ್ತಲ್ಲ, disqualify ಮಾಡುವುದು.

ಶ್ರೀ ಬಿ.ಬಿ. ನಿಂಗಯ್ಯ: Disqualify ಮಾಡುತ್ತೇವೆ ಎಂದು ಹೇಳಿದ್ದಾರೆ. ಅಮಾನತ್ತಲ್ಲ, ಅವನನ್ನು dismiss ಮಾಡುತ್ತೇವೆ ಎಂದು ಹೇಳಿದ್ದಾರೆ. ಬಹುಶಃ ಮಾನ್ಯ ಸಚಿವರು ಇದನ್ನು ಗ್ರಾಮ ಪಂಚಾಯಿತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆನ್ನುವ ಉದ್ದೇಶದಿಂದ ತಂದಿದ್ದೀರಿ ಎಂದು ಬೆಳಿಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಹೇಳಿದಿರಿ. ಆದರೆ, ಇದಕ್ಕೆ ಪಂಚಾಯಿತಿ ಸದಸ್ಯನೊಬ್ಬನನ್ನು ಹೊಣೆ ಮಾಡಿದರೆ ಹೇಗೆ? ಬಹಳಷ್ಟು ಸದಸ್ಯರು ಮೀಸಲಾತಿಯಲ್ಲಿ ಬಂದಿರತಕ್ಕಂಥವರು, ಎಸ್.ಸಿ./ಎಸ್.ಟಿ.ಗಳು, ಮಹಿಳೆಯರು, ಹಿಂದುಳಿದ ವರ್ಗದವರು. ಅವರುಗಳು ಅಮಾಯಕರಿದ್ದಾರೆ, ವಿದ್ಯಾವಂತರಲ್ಲ. ನಮ್ಮ ಸ್ನೇಹಿತರು ಮಾತನಾಡುವಾಗ ಹೇಳಿದರು. ಬಹಳಷ್ಟು ಜನ ಸದಸ್ಯರು ಕೂಲಿ ಮಾಡತಕ್ಕಂಥವರು, ಅವರಿಗೆ ಕಾನೂನಿನ ಅರಿವಿಲ್ಲ ಈ ತಿದ್ದುಪಡಿ ಅಂಥವರ ಮೇಲೆ ಘೋರವಾದ ಪರಿಣಾಮವನ್ನು ಬೀರುತ್ತದೆ. ಆ ದೃಷ್ಟಿಯಿಂದ ಇದರ ಬಗ್ಗೆ ಯೋಚನೆಯನ್ನು ಮಾಡಬೇಕು. ಬೆಳಗ್ಗೆ ನಾವೆಲ್ಲರೂ ಮಾತನಾಡುವಂಥ ಸಂದರ್ಭದಲ್ಲಿ ಇದಕ್ಕೆ ಕೇವಲ ಗ್ರಾಮ ಪಂಚಾಯತಿ ಸದಸ್ಯರನ್ನು ಮಾತ್ರ ಹೊಣೆ ಮಾಡದೆ, ಯಾರು P.D.O. ಇದ್ದಾರೆ, E.O. ಇದ್ದಾರೆ, ಅವರನ್ನು accountable ಮಾಡಿ, ನಂತರ ಈ ತಿದ್ದುಪಡಿಯನ್ನು ಮಂಡಿಸಿದರೆ ವಿಸ್ತೃತವಾಗಿ ಚರ್ಚೆಯಾಗಿ ಎಲ್ಲರೂ ಒಪ್ಪಿಕೊಳ್ಳಲು ಸಿದ್ದರಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ತಾವು ಬಹಳಷ್ಟು ಹಿರಿಯರಿದ್ದೀರಿ, ಅನುಭವಿಗಳು

ಇದ್ದೀರಿ, "ಗುಬ್ಬಿ ಮೇಲೆ ಬ್ರಹ್ಮಾಸ್ತ್ರ" ಪ್ರಯೋಗಿಸುವಂಥ ಈ ತಿದ್ದುಪಡಿಯನ್ನು ತಂದು ತೊಂದರೆ ಮಾಡುವುದನ್ನು ನಾನು ಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಹಿರಿಯ ಸದಸ್ಯರೂ ಮಾತನಾಡಿದ್ದಾರೆ. ವಿರೋಧ ಪಕ್ಷದ ನಾಯಕರ ಮನವಿಯ ಮೇರೆಗೆ ತಾವು ಹತ್ತು ನಿಮಿಷಗಳ ಕಾಲ ಸದನವನ್ನು adjourn ಮಾಡಿ ಎಲ್ಲರ ಅಭಿಪ್ರಾಯಗಳನ್ನೂ ತಿಳಿದುಕೊಂಡಿದ್ದೀರಿ. ಯಾವ್ಯಾವ ರಾಜ್ಯದಲ್ಲಿ ಯಾವ ರೀತಿಯಿದೆ ಎನ್ನುವ ಮಾಹಿತಿ ಬೇಕಲ್ಲವೇ? ವಿಶ್ವೇಶ್ವರ ಹೆಗಡೆಯವರು ಕೇರಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇವೆ ಎಂದು ಹೇಳಿದರು. ಅವರದೇ ಬಿ.ಜೆ.ಪಿ. ಸರ್ಕಾರ ಇತ್ತಲ್ಲವೇ? ಅವರು ತಮ್ಮ ಸರ್ಕಾರವಿರುವ ಯಾವುದಾದರೂ ರಾಜ್ಯದಲ್ಲಿ ತಿದ್ದುಪಡಿ ತಂದಿದ್ದಾರೆಯೇ ಎನ್ನುವ ಬಗ್ಗೆ ನನಗೆ clarification ಬೇಕು.

ಅಧ್ಯಕ್ಷರು : ನಮ್ಮ ರಾಜ್ಯದ್ದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಇದನ್ನು ತಂದಿರುವುದು ನಿಜವಾಗಿಯೂ ಸಂತೋಷ. ಅದರ ಬಗ್ಗೆ ನಾವೇನೂ ಹೇಳುವುದಿಲ್ಲ. ಯಾವ ಉದ್ದೇಶಕ್ಕಾಗಿ ಎಂದರೆ, disqualify ಮಾಡಬೇಕಾದ್ದೇ. ಏಕೆಂದರೆ, ನಾವೇನಾದರೂ ತಪ್ಪು ಮಾಡಿದರೆ ನಮ್ಮನ್ನು ಇಲ್ಲಿ disqualify ಮಾಡುವುದಿಲ್ಲವೇ? ಏನೂ ತಪ್ಪು ಮಾಡಲ್ಲದೇ ಇದ್ದರೂ disqualify ಮಾಡಿಲ್ಲವೇ? ದಯ ಮಾಡಿ ನೀವು ಹೇಳಬೇಕು. ಉದಾಹರಣೆಗೆ ಹೇಳಬೇಕೆಂದರೆ, ಯಾವುದಾದರೂ ಸಹಕಾರ ಇಲಾಖೆ ಸಭೆಗೆ ಮೂರು ಮೀಟಿಂಗ್‌ಗೆ ಹೋಗದೆ ಇದ್ದರೆ ಅಂಥವರನ್ನು disqualify ಮಾಡುವುದಿಲ್ಲವೇ? ಸಚಿವರಿಗೂ ಇದು ಗೊತ್ತಿದೆ, ಅವರೂ ಸಹ ಸಹಕಾರಿಗಳಾಗಿದ್ದಾರೆ. ಮೂರು ಮೀಟಿಂಗ್‌ಗೆ ಹೋಗದೇ ಇದ್ದರೆ disqualify ಮಾಡುತ್ತೀರೋ ಇಲ್ಲವೋ ಹೇಳಿ. ಇದರಲ್ಲಿ ಅಧಿಕಾರಿಗಳನ್ನೂ ಸೇರಿಸಿ ಎನ್ನುವ ಭಾವನೆಯನ್ನು ಸಿ.ಟಿ.ರವಿಯವರು ವ್ಯಕ್ತ ಮಾಡಿದರು. ಈಗ ಅವರು ಇಲ್ಲಿ ಇಲ್ಲ. ಅಧಿಕಾರಿಗಳು ತಪ್ಪು ಮಾಡಿದರೆ ಏನು ಮಾಡುತ್ತೀರಿ? ಕೇವಲ ಇವರ ಮೇಲೆ ಮಾತ್ರ ಏಕೆ ಕ್ರಮ ತೆಗೆದುಕೊಳ್ಳುತ್ತೀರಿ? ಎಂದು ಕೇಳಿದರು. ಅವರನ್ನೂ ಸೇರಿಸಿದ್ದಾರೆ. ನಾನು ಹೇಳುವುದೇನೆಂದರೆ, ಅಧಿಕಾರಿಗಳಿಗೆ ಭಯ ಬರಬೇಕಾಗುತ್ತದೆ. ಈ ಆದೇಶ ಕೊಟ್ಟ ತಕ್ಷಣ 100ಕ್ಕೆ 95^ನಷ್ಟು ಯಾವ

ಸದಸ್ಯರೂ disqualify ಆಗುವುದಿಲ್ಲ, ಈಗ ಗ್ರಾಮಗಳಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸಗಳು ನಡೆಯುತ್ತಿವೆ. ಎಲ್ಲಿಗೆ ಹೋಗಿ ನೋಡಿದರೂ, ಈ ಕೆಲಸಗಳನ್ನು ಮಾಡುತ್ತಿರುವವರು ಪಂಚಾಯಿತಿಯ ಸದಸ್ಯರು. ದಯಮಾಡಿ ಅದನ್ನು ಹೇಳುವುದಕ್ಕೆ ಹೋಗಬಾರದು. ನಾನು ಹೇಳುವುದೇನೆಂದರೆ ಒಂದು ಸಭೆ ಎಂದರೆ ಶಿಸ್ತು ಇರಬೇಕು. ಇದನ್ನು ಮಾಡಿ, ನಾವೇನು ಬೇಡ ಎನ್ನುವುದಿಲ್ಲ. ಆದರೆ ನಾನು ಪಂಚಾಯತ್ ರಾಜ್ ಸಚಿವರಲ್ಲಿ ಮನವಿ ಮಾಡುವುದು ಇಷ್ಟೇ, ಕೆಲಸ ಕಡೆ ಒಂದು ಸಾವಿರ ಓಟಿಗೆ ನಾಲ್ಕು ಸೀಟುಗಳು ಎಂದು ಮಾಡಿದ್ದಾರೆ.

4 ಹಳ್ಳಿ ಸೇರಿಸಿ ಮಾಡಿದ್ದಾರೆ. ಕೆಲವು ಹಳ್ಳಿಗಳು ದೊಡ್ಡ village ಆಗಿರುತ್ತದೆ. ಅವರೆಲ್ಲ vote ಅನ್ನು ಒಂದೇ ಕಡೆ 4 condidates ಗೆ ಹಾಕುತ್ತಾರೆ. ಇನ್ನು ಮೂರು ಹಳ್ಳಿಯವರು ಆ ಊರಿನಲ್ಲಿ ಒಂದೂ ಮನೆ ಸಹ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಪಂಚಾಯಿತಿಯಿಂದ ಬರುವ ಹಣವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ, ದಯಮಾಡಿ ಅದಕ್ಕೂ ಒಂದು ತಿದ್ದುಪಡಿ ಮಾಡಿ ಏನು 4 ಗ್ರಾಮಗಳಿವೆ, 4 ಗ್ರಾಮಗಳು ಸೇರಿ 4 seat ಗಳನ್ನು ಏನು ಮಾಡಿದ್ದೀರಿ, ಅದನ್ನು bifurcation ಮಾಡಿ ಆ ಒಂದೊಂದು ಊರಿಗೆ ಒಂದೊಂದು seat ಕೊಡಿ. ಕನಿಷ್ಠ 200 ಕ್ಕಾದರೂ ಒಂದು seat ಕೊಡಿ ಅಥವಾ 2 ಹಳ್ಳಿ ಸೇರಿಸಿ ಕೊಡಿ. 4–5 ಹಳ್ಳಿಗಳನ್ನು ಸೇರಿಸಿ 5 seat ಕೊಟ್ಟು 5 seatಗೆ 5 ಅವರೇ ಗೆಲ್ಲುತ್ತಿದ್ದಾರೆ. ಆದರೆ, ಬೇರೆ ಕಡೆ ಹಳ್ಳಿಗಳಿಗೆ ಅನ್ಯಾಯವಾಗುತ್ತಿದೆ. ದಯ ಮಾಡಿ, ಅದರ ಕಡೆಗೆ ಗಮನ ಹರಿಸಬೇಕೆಂದು ಮನವಿ ಮಾಡುತ್ತೇನೆ. ಕೆಲವು ಪಂಚಾಯತಿಗಳಲ್ಲಿ ಏನಾಗಿದೆ ಎಂದರೆ ಯಾವ ಊರಿನಲ್ಲಿ ಬಲಾಢ್ಯ ಸದಸ್ಯರಿರುತ್ತಾರೆ ಆ ಊರುಗಳಿಗೇ ಕೆಲಸ ಆಗುತ್ತಿದೆ.

ಅಧ್ಯಕ್ಷರು: ಈ ತಿದ್ದುಪಡಿ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಇದನ್ನು ಮಾಡಿ, ಸ್ವಾಮಿ. ನಾವು ಬೇಡ ಎಂದು ಹೇಳುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗ ಇದರ ಬಗ್ಗೆ ಬಹಳಷ್ಟು ಜನ ಬೆಳಕು ಚೆಲ್ಲಿದ್ದಾರೆ. ಇದರ ಬಗ್ಗೆ ಸರ್ಕಾರ ಹಠಮಾರಿತನ

ತೋರಿಸಬಾರದೆಂದು ನಾನು ಮನವಿ ಮಾಡುತ್ತೇನೆ. ಮಾನ್ಯ ಹೆಚ್.ಕೆ. ಪಾಟೀಲರಿಗೆ, ರೇವಣ್ಣರಿಗೆ ಯಾರೋ ಸದಸ್ಯರ ಮೇಲೆ ಬೇಸರ ಇರಬೇಕು, ಅವರನ್ನು ತೆಗೆಯುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ಮಾಡುತ್ತಿದ್ದಾರೆ ಎನ್ನುವ ಭಾವನೆ ಬರುವುದು ಬೇಡ. ಅಧಿಕಾರಿಗಳಿಗೆ ಜವಾಬ್ದಾರಿ fix ಮಾಡಿ. ಶಿವಲಿಂಗೇಗೌಡರು ಹೇಳಿದರು, ಅಧಿಕಾರಿಗಳಿಗೆ ಗ್ರಾಮ ಸಭೆಯನ್ನು ಕರೆಯುವ ಅಧಿಕಾರವನ್ನು fix ಮಾಡಿ. ಅವರು ಎಲ್ಲಿ ಇರುತ್ತಾರೂ ಅಲ್ಲಿಗೆ ಹೋಗಿ ಕರೆದುಕೊಂಡು ಬರುತ್ತಾರೆ. ಸದಸ್ಯರನ್ನು ಕರೆದುಕೊಂಡು ಬಂದು ward ಸಭೆ ಮಾಡಿಸುತ್ತಾನೆ, ಗ್ರಾಮ ಸಭೆ ಮಾಡಿಸುತ್ತಾನೆ, ಕೆಲಸವೂ ಸರಿಯಾಗಿ ಆಗುತ್ತದೆ. ಅದು ಬಿಟ್ಟು ಸುಮ್ಮನೆ ಅಮಾಯಕರ ಮೇಲೆ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಎಂದು ಹೇಳುತ್ತಾರಲ್ಲ, ಆ ರೀತಿ ಮಾಡುವುದು ಸರಿಯಲ್ಲ.

ಶ್ರೀ ಅಪ್ಪಾಜಿ ನಾಡಗೌಡ : ನಿಮ್ಮ ಅನುಭವಕ್ಕೆ ಬಂದಿಲ್ಲವೆಂದು ತೋರುತ್ತದೆ. ಅಧಿಕಾರಿಗಳು, P.D.O. ಗಳು ಊರಿಗೆ ಹೋಗಿ ಅಲ್ಲಿ ಏನಾದರೂ ಗ್ರಾಮಸಭೆಯಲ್ಲಿ ಅವನು ಏನಾದರೂ ವ್ಯಕ್ತವಾಗಿ ಮಾತನಾಡಿ ಇದು ಸದಸ್ಯರಿಗೆ ಸರಿಯಿಲ್ಲವೆಮದರೆ ಹೊಡೆದಂಥ ಪ್ರಕರಣಗಳಿವೆ. ಅವನನ್ನು ಊರು ಬಿಟ್ಟು ಓಡಿಸಿದಂಥ ಪ್ರಕರಣಗಳಿವೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಯಾರಾದರೂ ಗಲಾಟೆ ಮಾಡಿದರೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಿ. ನಾವು ಹೇಳುವುದು, ಗ್ರಾಮ ಸಭೆ ಕರೆಯುವುದಕ್ಕೆ ಅಧಿಕಾರಿಗಳಿಗೆ ಜವಾಬ್ದಾರಿ fix ಮಾಡಿ. ಸದಸ್ಯರಿಗೆ ಏಕೆ ಜವಾಬ್ದಾರಿ fix ಮಾಡುತ್ತೀರಿ? ಅಧಿಕಾರಿಗಳ ಕೈಯಲ್ಲಿ ನೀವು ಕೆಲಸ ಮಾಡಿಸಿ. ಸದಸ್ಯರು ಭಾಗವಹಿಸದೇ ಹೋದರೆ ನೀವು ಕ್ರಮ ತೆಗೆದುಕೊಳ್ಳಿ. ಆ ಸದಸ್ಯರುಗಳನ್ನು ಗ್ರಾಮ ಸಭೆಗೆ ಕರೆದಾಗ ಭಾಗವಹಿಸದೇ ಹೋದರೆ, preside ಮಾಡದೇ ಹೋದರೆ ಆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ. ಎಷ್ಟೋ ಕಡೆ ಸದಸ್ಯರು ಸಿಕ್ಕಿದರೂ ಆರು ತಿಂಗಳಾದರೂ ನಿಮ್ಮ P.D.O. ಗಳು ಸಿಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಎಷ್ಟೋ ಗ್ರಾಮ ಪಂಚಾಯತಿಗಳಲ್ಲಿ P.D.O.ಗಳೇ ಸಿಗುವುದಿಲ್ಲ. ಆಗ ಸದಸ್ಯ ಏನು ಮಾಡುವುದು?

(ಗೊಂದಲ)

ಅಧ್ಯಕ್ಷರು : ಅದು ಬೇಡ. ಈಗ ತಿದ್ದುಪಡಿ ಬೇಕೇ ಬೇಡವೇ ಎನ್ನುವ ಬಗ್ಗೆ ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : P.D.O.ಗೆ ಸಭೆಕರೆಯುವುದಕ್ಕೆ ಆಧಿಕಾರ fix ಮಾಡಿ. ಇದು ಸರಿಯಾಗಿದ್ದಿದ್ದರೆ ನಾವು ಒಪ್ಪಿಗೆ ಕೊಡುತ್ತಿದ್ದೆವು. ನಮಗೇನೂ ಕೊಡಬಾರದೆಂದು ಹಠ ಇಲ್ಲ. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬಿಟ್ಟೇ ಬಿಡುತ್ತೇವೆ ಎಂದು, ನಮಗೆ ಬಹುಮತ ಇದೆ ಮಾಡಿಯೇ ಮಾಡುತ್ತೇವೆಂದು ಸರ್ಕಾರ ಹಠಮಾರಿತನ, ಧೋರಣೆ ತಳೆದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಸನ್ಮಾನ್ಯ ಹಿರಿಯ ಸಚಿವರೆ, ತಾವು ದಯ ಮಾಡಿ ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಿ. ನಾವು ಹೇಳಿದ ಸಲಹೆಗಳನ್ನು ಸೇರಿಸಿ ತಿದ್ದುಪಡಿ ಮಾಡಿ ಆಮೇಲೆ ತನ್ನಿ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ಸಚಿವರ ಮೇಲೆ ವೈಯಕ್ತಿಕವಾಗಿ ಬಹಳ ಗೌರವ ಇದೆ. ದಯಮಾಡಿ, ಈ ಸದನದ ಎಲ್ಲರಿಗೂ ಗೌರವ ಕೊಟ್ಟ ಹಾಗೆ ಆಗುತ್ತದೆ. ಇವತ್ತು ಸಂವಿಧಾನದ ಅಡಿಯಲ್ಲಿ ಮುಖ್ಯಮಂತ್ರಿ, ಮಂತ್ರಿ ಕ್ಯಾಬಿನೆಟ್‌ನಲ್ಲಿ ನಿರ್ಧಾರ ತೆಗೆದುಕೊಂಡರೆ ಅದನ್ನು Cabinet Secretary implement ಮಾಡಬೇಕಾಗುತ್ತದೆ, ಅದನ್ನು ಮುಖ್ಯಮಂತ್ರಿ implement ಮಾಡುವುದಕ್ಕಾಗುವುದಿಲ್ಲ. ಮಂತ್ರಿ ಏನೇ ನಿರ್ಧಾರ ಮಾಡಿದರೂ ಅದಕ್ಕೆ ಸಂಬಂಧಪಟ್ಟ Principal Secretary ಸಹಿ ಹಾಕಿದರೆ ಅದು implement ಆಗುತ್ತದೆ. ಹಾಗೆಯೇ ಗ್ರಾಮಸಭೆಯಲ್ಲೂ ಸಹ P.D.O. ಗೆ fix ಮಾಡಿ. ಆ ಮನುಷ್ಯ ಮೀಟಿಂಗ್ ಕರೆಯಬೇಕು. ಮೂರು ಸಾರಿ ಸದನಕ್ಕೆ ನಾವು ಬರಲಿಲ್ಲವೆಂದರೆ disqualify ಆಗುತ್ತೇವೆ. ಮೂರು Parliament meeting ಗೆ ಬರಲಿಲ್ಲವೆಂದರೆ disqualify ಆಗುತ್ತೇವೆ. ಗ್ರಾಮ ಸಭೆ ಮೆಂಬರ್ ಸಹ ಆಗುತ್ತಾರೆ. ಹಾಗೆಯೇ ಗ್ರಾಮಸಭೆಗೆ ಆ ಸದಸ್ಯರು ಹೋಗದಿದ್ದರೆ disqualify ಆಗದಿರುವ ರೀತಿಯಲ್ಲಿ ಒಂದು provision

ಇದೆ ಎಂದು ಅಂದುಕೊಂಡಿದ್ದೇನೆ. so, ಅದು not necessary. ಆದ್ದರಿಂದ, ಅಧಿಕಾರಿಗೆ ಗ್ರಾಮಸಭೆಯನ್ನು must and should ಮಾಡಬೇಕೆಂದು fix ಮಾಡಿ. ಆ ಗ್ರಾಮ ಸಭೆಗೆ ಅಧ್ಯಕ್ಷರು, ಸದಸ್ಯರು attend ಮಾಡಬೇಕೆಂದು ಹೇಳಿ with reason ಯಾವುದೋ ಒಂದಕ್ಕೆ ಹೋಗದಿರಬಹುದು. ಮೂರಕ್ಕಿಂತ ಹೆಚ್ಚಿಗೆ absent ಆಗಬಾರದೆನ್ನುವುದನ್ನು ಮಾಡಿ. ಬಹುಶಃ ಇದಕ್ಕೆ ಇನ್ನೂ ಅನೇಕ ತಿದ್ದುಪಡಿಗಳು ತಂದು detail ಆಗಿ ಚರ್ಚೆ ಮಾಡುವುದಕ್ಕೆ ಮುಂದಿನ ಸದನದಲ್ಲಿ ತರುವುದು ಸೂಕ್ತ. ಕಾವೇರಿ ವಿಚಾರದಲ್ಲಿ ಹಠ ಮಾಡಿದರಲ್ಲ, ಆ ತರಹ ಹಠ ಮಾಡುವುದೇ ಸರ್ಕಾರದ ದೊಡ್ಡಸ್ತಿಕೆ ಎಂದು ಮಾಡುವುದು ಬೇಡ. ಸೋತು ಆಮೇಲೆ ಸ್ವಲ್ಪ ಅವಕಾಶ ಕೊಟ್ಟು ಮುಂದಕ್ಕೆ ಹೋದರೆ ಮಾನ್ಯ ಹೆಚ್.ಕೆ. ಪಾಟೀಲರಿಗೆ ಈ ಸದನ ಪೂರ್ತಿ ನಿಮ್ಮ ಜೊತೆಯಲ್ಲಿರುತ್ತೇವೆಂದು ಹೇಳ ಬಯಸುತ್ತೇನೆ.

ಶ್ರೀ ಡಿ. ನಾಗರಾಜಯ್ಯ (ಕುಣಿಗಲ್) : Reservation category ಕೆಳಗಡೆ ಚುನಾವಣೆಗೆ ನಿಲ್ಲಿಸುವುದಕ್ಕೆ ಚುನಾವಣಾ ಪ್ರತಿನಿಧಿಗಳನ್ನು ಹುಡುಕಾಡಬೇಕಾಗಿದೆ. ಅವರು ವಿದ್ಯಾಭ್ಯಾಸ ಇಲ್ಲದಿರತಕ್ಕಂಥವರು, ಅವರಿಗೆ ಬರವಣಿಗೆ ಗೊತ್ತಿಲ್ಲದಿರುವಂಥದ್ದು, ಇವತ್ತು ಅವರೇ ವಾರ್ಡ್ ಸಭೆ ಕರೆಯಬೇಕೆಂದು ಹೇಳಿದರೆ ಅವರು ಅವರವರ ಗ್ರಾಮ ಪಂಚಾಯತಿಯ ಸದಸ್ಯರಾಗಿ P.D.O. ಅಥವಾ Secretary ಹತ್ತಿರ ಹೋಗಿ ನಿಂತುಕೊಳ್ಳ-ಬೇಕಾಗುತ್ತದೆ. ಸ್ವಾಮಿ, ವಾರ್ಡ್ ಸಭೆ ಕರೆಯುವುದಕ್ಕೆ ನನಗೆ ಅಧಿಕಾರ ಕೊಟ್ಟಿದ್ದಾರೆ, ವಾರ್ಡ್ ಸಭೆ ಕರೆಯಬೇಕು, ನೀವು ನನಗೆ ವಾರ್ಡ್ ಸಭೆ ಕರೆಯುವುದಕ್ಕೆ ಬರೆದುಕೊಡಪ್ಪಾ ಎಂದು ಕೇಳಬೇಕು. ನೋಟೀಸ್ ಬರೆಯುವವರು ಯಾರು? ವಾರ್ಡ್ ಸಭೆ fix ಮಾಡುವವರು ಯಾರು?

ಅಧ್ಯಕ್ಷರು : ತಿದ್ದುಪಡಿಯಲ್ಲಿ ಇದೆಲ್ಲ ಬಂದಿದೆ.

ಶ್ರೀ ಡಿ. ನಾಗರಾಜಯ್ಯ : ತಿದ್ದುಪಡಿಯಲ್ಲಿ ಬಂದಿರಬಹುದು. ಆದರೆ, ಅವರು disqualify ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ, ಅವರಿಗೆ ವಿದ್ಯಾಭ್ಯಾಸ ಇಲ್ಲ. Reservation category ಯಲ್ಲಿರತಕ್ಕಂಥವರನ್ನು ಹಿಡಿದುಕೊಂಡು ಬಂದು ಚುನಾವಣೆಗೆ ನಿಲ್ಲಿಸಿರುವಂಥದ್ದು.

ಅಧ್ಯಕ್ಷರು : ನೋಡಿ ಇಲ್ಲಿದೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ವಾರ್ಡ್ ಸಭೆಗಳನ್ನು ಕರೆಯುವುದಕ್ಕೆ ನೆರವು ನೀಡತಕ್ಕದ್ದು. ಒಂದು ವೇಳೆ ಆ ರೀತಿ ನೆರವು ನೀಡಲು ಒಪ್ಪದಿದ್ದಲ್ಲಿ . . .

ಶ್ರೀ ಡಿ. ನಾಗರಜಯ್ಯ : ಅವರಿಗೆ ನೆರವು ನೀಡಿ ಎಂದು ಕೇಳುವಂಥ ಬುದ್ಧಿಯೇ ಇಲ್ಲವಲ್ಲ. ಮಾನ್ಯ ಬಾಲಕೃಷ್ಣರವರು ಹೇಳುವಂಥ ರೀತಿಯಲ್ಲಿ ವಾರ್ಡ್ ಸಭೆ ಕರೆಯುವುದಕ್ಕೆ ಅವರ ವಾರ್ಡ್‌ನಲ್ಲಿ P.D.O. ಗೆ ಅಧಿಕಾರ ಕೊಡಿ. P.D.O. ಗೆ ಅಧಿಕಾರ ವಹಿಸಿ ಅವನು ವಾರ್ಡ್ ಸಭೆ ಕರೆಯದೇ ಹೋದರೆ ಆಗ ಏನು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ದಯಮಾಡಿ ಸದಸ್ಯರನ್ನು disqualify ಮಾಡುವುದಕ್ಕೆ ಬರುವುದಿಲ್ಲ. ಸದಸ್ಯರನ್ನು disqualify ಮಾಡುವಂಥದ್ದು ಬೇಡ. ಸದಸ್ಯರನ್ನು disqualify ಮಾಡುತ್ತೇವೆನ್ನುವುದಾದರೆ, P.D.O. ಏಕೆ ಬೇಕು? Secretary ಏಕೆ ಬೇಕು? P.D.O. Secretary ಮಾಡುವ ಕೆಲಸವನ್ನು ಗ್ರಾಮ ಪಂಚಾಯತಿ ಸದಸ್ಯರು ಮಾಡಿ ಎಂದು ಹೇಳಿದರೆ ಅದರ ಅರ್ಥ ಏನು? ಆ ಕಾರಣಕ್ಕಾಗಿ ಸಭೆ ಕರೆಯುವುದನ್ನು ವಾರ್ಡ್‌ವೈಸ್ ಸಭೆ ಕರೆಯುವ ಜವಾಬ್ದಾರಿ P.D.O. ಅಥವಾ ಕಾರ್ಯದರ್ಶಿ ಯಾರು ಇರುತ್ತಾರೋ ಅವರು ನಿರ್ವಹಿಸಬೇಕೇ ವಿನಹಾ ಮೀಟಿಂಗ್‌ಗೆ ಅಟೆಂಡ್ ಆಗದಿರುವ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಕೆ.ಎಸ್.ಪುಟ್ಟಯ್ಯ : ಮಾನ್ಯ ಅಧ್ಯಕ್ಷರೆ, ಸಮಾನ ಹೊಣೆಗಾರರನ್ನಾಗಿ ಮಾಡಿದರೆ ಮುಗಿದು ಹೋಯಿತು. ನಮ್ಮೆಲ್ಲರ ಒಟ್ಟು ಚರ್ಚೆ ಸಮಾನ ಹೊಣೆಗಾರರನ್ನಾಗಿ ಮಾಡಿದರೆ ತಮ್ಮ ವಿಷಯದಲ್ಲಿ, ತಾವು ಹೇಳುತ್ತಿರತಕ್ಕಂಥ ವಿಷಯದಲ್ಲಿ ವಿರೋಧವಿಲ್ಲ. ಆದರೆ, ಬಹಳ ಚೆನ್ನಾಗಿ ಗ್ರಾಮ ಪಂಚಾಯಿತಿ ಕೆಲಸ ಮಾಡಬೇಕಾದರೆ ವಾರ್ಡ್ ಸಭೆಗೆ ಸಮಾನ ಹೊಣೆಗಾರರನ್ನಾಗಿ ಮಾಡುವ ಒಂದು ನೀತಿ ತಂದರೆ ಅದೇ ಸಾಕು.

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ಇದು ಹೊಸ ವಿಚಾರ ಏನೂ ಅಲ್ಲ. ಕಾನೂನಿನಲ್ಲಿ ಮತ್ತು ಸಂವಿಧಾನದಲ್ಲೂ ಸಹಿತ ಈ ಬಗ್ಗೆ ಅಧಿಕಾರವನ್ನು ಎಲ್ಲಾ ಚುನಾಯಿತ ಸಂಸ್ಥೆಗಳಲ್ಲಿ ಅಧಿಕಾರವನ್ನು ಯಾರಿಗೆ ಕೊಟ್ಟಿದ್ದಾರೋ, ಅವರು ಜವಾಬ್ದಾರಿಯಿಂದ ಕಾರ್ಯ

ನಿರ್ವಹಿಸುವುದನ್ನು ನಾವು ನೋಡುತ್ತೇವೆ. ಅದು Assembly ಇರಬಹುದು, Parliament ಇರಬಹುದು. ಇಲ್ಲಿ ಎಲ್ಲಾ ಪ್ರಯೋಗಗಳನ್ನು ಮಾಡಿದ್ದಾರೆ. 1986–87 ರಲ್ಲಿ ಬಂದಿರತಕ್ಕಂಥ ಕಾನೂನಿನಲ್ಲಿ ಸಹಿತ ಗ್ರಾಮಸಭೆಗಳು, ಮತ್ತೊಂದು ಕರೆಯುವಂಥ ಜವಾಬ್ದಾರಿಯನ್ನು ಅಧಿಕಾರಿಗಳ ಮೇಲೆ ಹೊರಿಸಿದ್ದೆವು. ಆದರೆ, ಇದರಲ್ಲಿ ತಮಗೂ ಗೊತ್ತಿದೆ, ಎಲ್ಲೂ ಯಶಸ್ವಿಯಾಗಿಲ್ಲ. ಆದರೆ ಎಷ್ಟರ ಮಟ್ಟಿಗೆ manipulation ನಡೆಯುತ್ತಿದೆ ಎಂದರೆ ಅದು ತಮ್ಮ ಪರವಾಗಿ ಜನ ವಿರೋಧಿ ಕಾರ್ಯಕ್ಕೂ ಸಹಿತ ಅದು ನಡೆಯುವಂಥ ಪರಿಸ್ಥಿತಿ ಬರುತ್ತದೆ. ನಿಮ್ಮ ಉದ್ದೇಶ, ಸರ್ಕಾರದ ಉದ್ದೇಶ, ಕಾನೂನಿನ ಉದ್ದೇಶ ಒಂದೂ ಸಹ ಸಫಲವಾಗದಿರುವುದನ್ನು ನಾವು ನೋಡಿದ್ದೇವೆ. ಅದಕ್ಕಾಗಿ ಇದೊಂದು ಹೊಸ ಪ್ರಯೋಗ ಹೊಸ ಜವಾಬ್ದಾರಿ ಹೊರಿಸುವಂಥ ಕೆಲಸ, ಇದನ್ನು ಮಾಡಿದಾಗ ಯಾರೂ disqualify ಆಗುವುದಿಲ್ಲ. ಆಮೇಲೆ ಅನೇಕ restrictions ಇದೆ. ನಾವು ಯಾರೂ disqualify ಆಗಿಲ್ಲ, ಆಗುವುದೂ ಇಲ್ಲ. ಅತೀ ಒಂದು ಕೊನೆಯ ಹಂತದಲ್ಲಿರುವಾಗ ಆ ಪರಿಸ್ಥಿತಿ ಬರುತ್ತದೆ, ಆ ಭಯ ನಮ್ಮಲ್ಲಿ ಇರಬೇಕು, ಅದು ಕಾನೂನು ಬದ್ಧವಾಗಿ ಆಗಬೇಕು. ಹಾಗಾಗಿ ಈ ಮೂಲಕ General Body ಎನ್ನುವಂಥ ವಾರ್ಡ್ ಸಭೆ ಎನ್ನುವಂಥ, ಗ್ರಾಮಸಭೆ ಎನ್ನುವಂಥ, ವಿಧಾನಸಭೆ ಎನ್ನುವಂಥದ್ದು ನೈಜವಾಗಿ, ಅರ್ಥಬದ್ಧವಾಗಿ ನಡೆಯಬೇಕಾದರೆ ಇಂಥ ಒಂದು ಅರ್ಥವತ್ತಾಗಿ ನಡೆಯಬೇಕಾದರೆ ಇಂಥ ಒಂದು deterrent ಕಾನೂನು ಬೇಕೆಂದು ಹೇಳ–ಬಯಸುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ): ತಿದ್ದುಪಡಿ ಏನು ತಂದಿದ್ದಾರೆ, ಅವರಿಗೆ ಸಹಕರಿಸಬೇಕು, ಇನ್ನೊಂದು ಮಾಡಬೇಕೆಂದು ತಿದ್ದುಪಡಿ ಮಾಡಿದ್ದಾರೆ. Part and parcel ಅವರ duty ಅದು. ಅದಕ್ಕೆ ತಿದ್ದುಪಡಿ ತರುವುದೇನಿದೆ? Section 111 ರಲ್ಲಿ Secretary ಬಗ್ಗೆ ಹೇಳಿದ್ದೀರಿ. Secretary ಕರ್ತವ್ಯ ಏನು ಎನ್ನುವುದು ನಮ್ಮ rules ನಲ್ಲಿ ಎಲ್ಲಾ ಇದೆ. ಅದನ್ನು violate ಮಾಡಿದರೆ ನೀವು ಅದನ್ನು ತಿದ್ದುಪಡಿ ಮಾಡಿ ಮಾಡಬೇಕೇ? ಕ್ರಮ ತೆಗೆದುಕೊಳ್ಳಲಿಕ್ಕೆ ಅವಕಾಶವಿದೆ. ಆದರೆ, ಇಲ್ಲಿ ಮೂಲತಃ ಸಭೆ

ಕರೆಯುವಂಥ ಒಂದು ಜವಾಬ್ದಾರಿ ಯಾವುದೇ ಒಂದು ಸಭೆಯನ್ನು ಕರೆಯುವಂಥದ್ದಾದರೆ ಯಾರು ಕರೆಯಬೇಕು? ಅಧಿಕಾರಿಗಳು ಕರೆಯಬೇಕು.

ವಿಧಾನ ಸಭೆ ಕರೆಯಬೇಕಾದರೆ ಕಾರ್ಯದರ್ಶಿಯವರು ತಾನೇ ಕರೆಯುವುದು. ತಾವು ಅಧ್ಯಕ್ಷರು direction ಕೊಡುತ್ತೀರೇ ಹೊರತು ಆದರೆ ಅಧ್ಯಕ್ಷರೇ ಸಭೆ ಕರೆಯಬೇಕೆನ್ನುವ ರೀತಿಯಲ್ಲಿ ಇದಾಗಿದೆ. ಈ ತಿದ್ದುಪಡಿ, ಸಂವಿಧಾನವನ್ನು ತಿದ್ದುಪಡಿ ಮಾಡಿ ಪಂಚಾಯತ್ ರಾಜ್ ವ್ಯವಸ್ಥೆಯಿಂದ ಜನರ ಕೈಗೆ ಅಧಿಕಾರ ಕೊಡುವುದು ಎಂದೇನು ಮೂಲ ಉದ್ದೇಶದಿಂದ ಮಾಡಿದ್ದಾರೆ, ನೀವು ಅದನ್ನು ಮೊಟಕುಗೊಳಿಸುವಂಥ ಕೆಲಸ ಮಾಡಿದ್ದೀರಿ ಒಂದು ಸಭೆ ಕರೆದಿಲ್ಲ ಅಂದರೆ disqualification ಏಲ್ಲಿದೆ? ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ meeting ಏನೇ ಕರೆಯುವುದು executive power, ಅದನ್ನು ಯಾರೂ execute ಮಾಡಬೇಕೊ ಅವರೇ ಮಾಡಬೇಕು. ಸಭೆಗೆ ಬರಲಿಲ್ಲ ಸಹಕಾರ ಕೊಡಲಿಲ್ಲವೆಂದರೆ ಅದಕ್ಕೆ disqualification ಅದೇನಾದರೂ ಸೇರಿಸಬೇಕೇ ಹೊರತು, preside ಮಾಡಲಿಕ್ಕೆ refuse ಮಾಡಿದಾಗ ಮಾತ್ರ ಮಾಡಬೇಕು. ಇದು ಸರಿಯಲ್ಲ. ನೀವು ಮೂಲ ಉದ್ದೇಶವನ್ನೇ ಈ ತಿದ್ದುಪಡಿ ಮೂಲಕ ಹಾಳು ಮಾಡುತ್ತಿದ್ದೀರಿ.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯರಾದ ಜಗದೀಶ್‌ಶೆಟ್ಟರ್‌ರವರು, ದತ್ತಾರವರು, ಸುಧಾಕರ್‌ರವರು, ಶಿವಲಿಂಗೇಗೌಡರವರು, ಬಾಲಕೃಷ್ಣರವರು, ವಿಶ್ವೇಶ್‌ರವರ ಹೆಗಡೆಯವರು ಚಲುವರಾಯಸ್ವಾಮಿಯವರು, ರೇವಣ್ಣನವರು, ರೇವಣ್ಣನವರು, ನಾಗರಾಜಯ್ಯನವರು, ಬೋಪಯ್ಯನವರು, ಬಹಳಷ್ಟು ವಿಚಾರಗಳಲ್ಲಿ ತಮ್ಮ ಬೆಳಕು ಚೆಲ್ಲಿದ್ದಾರೆ. ಸರ್ಕಾರಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಸನ್ಮಾನ್ಯ ಚಲುವರಾಯ ಸ್ವಾಮಿಯವರು ನಾವು ಎರಡು meeting ತಪ್ಪಿಸುವುದಿಲ್ಲವೇ ಎಂದು ಕೇಳುತ್ತಿದ್ದರು. ನಾವು ಎರಡು meeting ತಪ್ಪಿಸುವುದು ಬೇರೆ ನಮ್ಮ ಹಕ್ಕನ್ನು ನಾವು ಮೊಟಕುಗೊಳಿಸಿಕೊಳ್ಳುತ್ತೇವೆ. ಇಲ್ಲಿರುವ ಉದ್ದೇಶ ಏನು? ಯಾರ ಅಧಿಕಾರವನ್ನು ಈ ಸದಸ್ಯರು ಈ ಅಧ್ಯಕ್ಷ ಮೊಟಕುಗೊಳಿಸುತ್ತಾರೆ? ಶಿವಲಿಂಗೇಗೌಡರವರಿಗೆ ನಾನು ಇಷ್ಟೇ ಹೇಳುತ್ತೇನೆ. ಒಬ್ಬ ಮೀಸಲಾತಿಗೆ ಸಂಬಂಧಪಟ್ಟಿರತಕ್ಕಂಥ ಅನಕ್ಷರಸ ಇವತ್ತು ಇರಬಹುದು, ನಾನು ನಿಮ್ಮ

ಕಳಕಳಿಗೆ ಮೆಚ್ಚಿಕೊಳ್ಳುತ್ತೇನೆ ಹಾಗೂ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಈ capacity building ಅಂತಾರಲ್ಲ, ಯಾರು ಅನಕ್ಷರಸ್ಥರಿದ್ದಾರೆ, ಯಾರು ವಿದ್ಯಾಭ್ಯಾಸ ಹೆಚ್ಚು ಮಾಡಿಲ್ಲ, ಅವರಿಗೆ ವಿಶೇಷವಾಗಿ ಇರುವ ಇಂಥ ಕಾನೂನಿನ ಬಗ್ಗೆ ತಿಳಿವಳಿಕೆ ಕೊಡುವ training camps, orientation camps, ಅವೆಲ್ಲವನ್ನೂ ಮಾಡಿ ಅವರಿಗೆ capacity building ಮಾಡುತ್ತೇವೆ. ಆದರೆ ಇಲ್ಲಿ ಒಬ್ಬ ಪಂಚಾಯಿತಿಯ ಅಧ್ಯಕ್ಷ ಗ್ರಾಮ ಸಭೆಯನ್ನು ಕರೆಯದೇ ಹೋದರೆ, ತನ್ನ ಹಕ್ಕು ಮೊಟಕಾಗಲಿಲ್ಲ. ಅವನು 2–3 ಸಲ ತಪ್ಪಿಸಬಹುದು. ಆ ಊರಿನ ಸರ್ವ ಜನರ ಹಕ್ಕು ಏನಿದೆ, ಯಾವ ಹಕ್ಕನ್ನು ನಾವು 73 ನೇ ಸಂವಿಧಾನದ ತಿದ್ದುಪಡಿ ಮೂಲಕ ಜನರ ಕೈಗೆ ಅಧಿಕಾರ ಎಂದು ಕೊಟ್ಟಿದ್ದೇವೆ, ಆ ಜನರ ಕೈಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು ಕೊಟ್ಟ ಕಾಗದ ಪತ್ರ ಸೃಷ್ಟಿ ಮಾಡುವುದಕ್ಕೆ ಅವರು ಕಿತ್ತುಕೊಳ್ಳುತ್ತಾರಲ್ಲ, ಆ ರೀತಿ ಕಿತ್ತುಕೊಳ್ಳುವುದು ಆಗಬಾರದು. ಜನರ ಕೈಗೆ ನೈಜ ಅಧಿಕಾರ ಯಾವಾಗ ಆಗುತ್ತದೆ ಎಂದರೆ ನಾವು ಗ್ರಾಮ ಸಭೆ ಕರೆದಾಗ, ವಾರ್ಡ್ ಸಭೆ ಕರೆದಾಗ. ಪಂಚಾಯಿತಿಯಲ್ಲಿ 15 ಜನ ಕುಳಿತು ಚರ್ಚೆ ಮಾಡಿದಾಗ ಅದು ಜನರ ಕೈಗೆ ಅಧಿಕಾರ ಕೊಟ್ಟ ಹಾಗೆ ಅಲ್ಲ. ಯಾವ ಜನರಿಗೆ ಅಧಿಕಾರ ಕೊಟ್ಟಿದ್ದೇವೆ, ಆ ಜನರ ಸಭೆಯನ್ನು ಕರೆಯಬೇಕಾಗಿತ್ತು, ಕರೆದಿಲ್ಲ. ಏನ್ರೀ ಕರೆಯುತ್ತಾರೆ ಬಿಡ್ರಿ, ಏಕೆ ಕರೆಯಲ್ಲವೆಂದು ಸಂಶಯ ಮಾಡಿಕೊಳ್ಳುತ್ತೀರಿ ಎಂದು ಯಾರಾದರೂ ಅನ್ನಬಹುದು. ಬಾಲಕೃಷ್ಣರವರೆ, ನಿಮಗೆ ಆಶ್ಚರ್ಯ–ವಾಗಬಹುದು. ಸಂವಿಧಾನ ತಿದ್ದುಪಡಿಯ ನಂತರ ಪಂಚಾಯತ್ ರಾಜ್ ಬಂದು ಇಷ್ಟು ವರ್ಷವಾಯಿತಲ್ಲ. ಸರ್ಕಾರಗಳು ಬಂದವು, ಹೋದವು, ಆದರೆ, ವಾರ್ಡ್ ಸಭೆ ಇನ್ನೂ ಆಗಲಿಲ್ಲ. ನಾನು ಅದರ ಸಲುವಾಗಿ ಹೇಳುತ್ತಿದ್ದೇನೆ. ಗ್ರಾಮ ಸಭೆ ಕೆಲವು ಕಡೆ ಆಗಿವೆ, ಕೆಲವು ಕಡೆ ಆಗಿಲ್ಲ, ಕೆಲವು ಕಡೆ ಆದಂತೆ ಸೃಷ್ಟಿ ಮಾಡಿದ್ದಾರೆ. ಆ ಗ್ರಾಮ ಸಭೆಯ ಆಧಾರದ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾವಿರಾರು ಕೋಟಿ ರೂಪಾಯಿಗಳು ಹರಿದು ಹೋಗಿವೆ. ನಾನು ತರಾತುರಿಯಿಂದ ಈ ಬಿಲ್ ತರುತ್ತಿಲ್ಲ. ಇದನ್ನು ತಂದು ಬಿಟ್ಟರೆ ನಾಳೆ ಯಾವುದಾದರೂ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸಭೆ ಕರೆಯುವುದನ್ನು ಬಿಟ್ಟು ಬಿಡುತ್ತಾನೆಯೆ? ನಾಳೆ ಅವನ ಮೇಲೆ ಕ್ರಮ ತೆಗೆದುಕೊಂಡು ಅವನನ್ನು disqualify ಮಾಡಿ ಅದರಿಂದ ನಾನು ಖುಷಿ ಪಡಬೇಕಾಗಿಲ್ಲ. ನಮ್ಮ ಸರ್ಕಾರಕ್ಕೆ ಆ ಉದ್ದೇಶ ಇದ್ದಿದ್ದರೆ ಆ ಅಧಿಕಾರವನ್ನು ಮಂತ್ರಿಯಾದ ನನ್ನ ಬಳಿ

ಇಟ್ಟುಕೊಳ್ಳುತ್ತಿದ್ದೆ. ಸರ್ಕಾರ ಇಟ್ಟುಕೊಳ್ಳುತ್ತಿತ್ತು. ಇವತ್ತು Regional Commissioner ಗೆ ಕೊಡುವುದರ ಮೂಲಕ it becomes quasi-judicial proceedings. 45 ದಿವಸದೊಳಗೆ enquiry ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರದ ಹತ್ತಿರ ಇಟ್ಟುಕೊಂಡಿಲ್ಲವೆಂದರೂ ಅಲ್ಲಿ Principal Secretary ಗೆ ಕೊಟ್ಟಿದ್ದೀರಿ ಅಲ್ಲಿ heavy ಆಗುತ್ತದೆಂದು decentralization ಮಾಡಿರುವುದು ಒಳ್ಳೆಯದು.

ಶ್ರೀ ಹೆಚ್.ಕೆ.ಪಾಟೀಲ್ : ನೀವು ಪೂರ್ತಿಯಾಗಿ ನನ್ನ ಮಾತು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ತಾವು ಹೇಳುವುದು correct. ಮಂತ್ರಿಯೇ ಎಲ್ಲಾ ಮಾಡುವುದಿಲ್ಲ.

ಅಧ್ಯಕ್ಷರು : ನೀವು 8–10 ವರ್ಷ ನಡೆಸಿದ್ದಿರಲ್ಲ, ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ E.O. ನೇಮಿಸಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : ನಾನು ನನ್ನ ಕಾಲದಲ್ಲಿ ಏನಾಗಿದೆ ಎಂಬುದರ ಬಗ್ಗೆ ಅಂಕಿ ಅಂಶಗಳನ್ನು ಕೊಡಲಿಚ್ಚಿಸುತ್ತೇನೆ. ಎಷ್ಟು ಜನ ಇಂಜಿನಿಯರ್ಸ್ ನೇಮಿಸಿದ್ದೇನೆ, ಎಷ್ಟು ಜನ P.D.O. ಗಳನ್ನು ನೇಮಿಸಿದ್ದೇನೆ, E.O. ಗಳ process ಚಾಲೂ ಮಾಡಿದೆ. ಇದನ್ನು ಹಿಂದಿನ ಸರ್ಕಾರಗಳು ಯಾವುದೂ ಮಾಡಿರಲಿಲ್ಲ. ನನ್ನ ಕಾಲದಲ್ಲಿ ನಾನು ಒಂದಿಷ್ಟು ಕೆಲಸವನ್ನಾದರೂ ಮಾಡಿದ್ದೇನೆ. ಹಿಂದೆನವರಿಗೆ ಅದನ್ನು ಮಾಡುವುದಕ್ಕಾಗಿರಲಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಇನ್ನೊಂದು ಅವಕಾಶದಲ್ಲಿ ನಮ್ಮ ಹಿಂದಿನ ಸರ್ಕಾರ ಏನೇನು ಮಾಡಿದೆ ಎಂದು ಹೇಳಿ ಎಂದರೆ ನಾನು ಬೇಕಾದರೆ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : P.D.O. ಗಳನ್ನು ನೇರವಾಗಿ ನೇಮಕ ಮಾಡುವುದನ್ನು ಶುರು ಮಾಡಿದ್ದೇ ನಾನು ಮೊದಲು ಎಲ್ಲರೂ ಪ್ರಮೋಟೀಸ್ ಇದ್ದರು.

ಶ್ರೀ ಹೆಚ್.ಕೆ. ಪಾಟೀಲ್ : ನಾನು ನಿಮ್ಮಲ್ಲಿ ಇಷ್ಟೇ ಆಗ್ರಹ ಮಾಡುತ್ತೇನೆ. ತಮಗೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಜನರ ಕೈಗೆ ಅಧಿಕಾರ ಎನ್ನುವಂಥ ಮೂಲ ಕಲ್ಪನೆಯಿಂದ ನಿಮ್ಮೆಲ್ಲರ ಹೋರಾಟದಿಂದ ಸಂವಿಧಾನ 73ನೇ ತಿದ್ದುಪಡಿಯಾಗಿ ಒದೊಂದು

ಪಂಚಾಯತ್ ರಾಜ್ ವ್ಯವಸ್ಥೆಯಾಗಿದೆ. ಅದು ದುರ್ದೈವದಿಂದ ನಾವು ಜನರ ಕೈಗೆ ಅಧಿಕಾರ ಕೊಡಲಿಕ್ಕೆ. ವಾರ್ಡ್ ಸಭೆಗೆ, ಗ್ರಾಮ ಸಭೆಗೆ ಕೊಡಲಿಲ್ಲ. ಇವತ್ತು ಈ ಸಭೆ ಆಗಲೇಬೇಕು ಎನ್ನುವಂಥ ರೀತಿಯಲ್ಲಿ ಕಡ್ಡಾಯಗೊಳಿಸುವುದಕ್ಕೆ ಒಂದು ನೈತಿಕವಾದಂಥ ಒತ್ತಡ, ಈ ಒತ್ತಡ ತರುವುದಕ್ಕೆ ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ ಜನರ ಕೈಗೆ ಅಧಿಕಾರ ಕೊಡುವುದಕ್ಕೆ ನಿಮ್ಮೆಲ್ಲರ ನೆರವು, ಬೆಂಬಲ ಸರಕಾರಕ್ಕೆ ಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಒಂದೇ ಒಂದು ಮಾತು, ಸನ್ಮಾನ್ಯ ಅಧ್ಯಕ್ಷರೆ,

ಶ್ರೀ ಹೆಚ್.ಕೆ. ಪಾಟೀಲ್ : ನೀವು ಇಷ್ಟೇಕೆ ಹೇಳುತ್ತಿದ್ದೀರಿ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Disqualification ಎನ್ನುವ ಪದ ತೆಗೆಯಿರಿ ಎಂದು ನಾನು ಹೇಳುತ್ತಿದ್ದೇನೆ ಅಷ್ಟೆ.

(ಗೊಂದಲ)

ಅಧ್ಯಕ್ಷರು : ಆಯಿತು. ನಿಮ್ಮ ಅಭಿಪ್ರಾಯ ಗೊತ್ತಾಗಿದೆ. ಅವರ ಅಭಿಪ್ರಾಯ ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಜನ ಪ್ರತಿನಿಧಿಗಳನ್ನು disqualify ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ವಿಶ್ವೇಶ್ವರ ಹೆಗಡೆಯವರರೆ, ನೀವು ರಾಜಕಾರಣ mix ಮಾಡದೇ ಇರತಕ್ಕಂಥ ಕೆಲವು ವಿಚಾರಗಳು ಇರುತ್ತವೆ. ಅಲ್ಲಿ ರಾಜಕಾರಣ ಅನವಶ್ಯಕವಾಗಿ ತರಲೇ ಬಾರದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದರಲ್ಲಿ ರಾಜಕಾರಣ ಏನಿದೆ?

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ ರಾಜಕಾರಣ ಏನಿದೆ?

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ನಮ್ಮ ನಿಮ್ಮಲ್ಲಿ ಇಷ್ಟೇ ಹೇಳುವುದು. ಯಾವ ಕಾರಣಕ್ಕೂ ಈ ಒಂದು provisionದುರುಪಯೋಗವಾಗುವುದಿಲ್ಲ. ಜನರ ಗ್ರಾಮ ಸಭೆ it is a general body, public debate takes place there.

ಶ್ರೀ ಜಗದೀಶ್ ಶೆಟ್ಟರ್ : ನೀವು ಮಾಡಿ ಸರ್, ನಾನು ಬೇಡ ಎಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್: ನಾನು ಏಕೆ ಇದನ್ನು ಹೇಳುತ್ತೇನೆಂದರೆ, ಅದನ್ನು ತಪ್ಪಿಸುತ್ತಾರಲ್ಲ, ಅದಕ್ಕೆ ಹೇಳುತ್ತಿದ್ದೇನೆ. ನೀವು ಒಂದು ಉದಾಹರಣೆ ಕೊಡುತ್ತಿದ್ದೀರಿ. ಸನ್ಮಾನ್ಯ ರೇವಣ್ಣನವರು ಹೇಳಿದರು. ಮೂರು co-operative society ಯ ಸಭೆಗೆ ಗೈರು ಹಾಜರಾದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವರು ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾಗಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :Disqualification ಎನ್ನುವುದನ್ನು ಹಿಂತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಏಕೆ ಇವರು ಹೀಗೆ ಮಾಡುತ್ತಿದ್ದಾರೆ, ಜನರ ಕೈಗೆ ಅಧಿಕಾರ ಕೊಡುವುದಕ್ಕೆ ಪ್ರತಿಪಕ್ಷದವರ ವಿರೋಧ ಇದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಜನರ ಕೈಗೆ ಅಧಿಕಾರ ಕೊಡಿ. ಅದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನೀವು ಆ ಪದ ತೆಗೆಯಲೇ ಬೇಕೆ, ಇಲ್ಲದಿದ್ದರೆ ನಾವು ಇದರ ವಿರುದ್ಧ protest ಮಾಡುತ್ತೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧಿಕಾರಿಗಳನ್ನು ಜವಾಬ್ದಾರಿ ಮಾಡಲಿ. ಅದು ಬಿಟ್ಟು ಈ ರೀತಿ ಮಾಡಿದರೆ ಹೇಗೆ? ನಾವು ಇದನ್ನು ವಿರೋಧಿಸುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

ಅಧ್ಯಕ್ಷರು : ಆಯಿತು, ಬಿಡಿ ನೀವು ಉತ್ತರ ಹೇಳಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಕಾಂಗ್ರೆಸ್‌ನವರು ನಮ್ಮ ಜನರ ಕೈಗೆ ಅಧಿಕಾರ ಕೊಡುವುದಕ್ಕೆ ಬದ್ಧರಾಗಿದ್ದೇವೆ, ವಚನಬದ್ಧರಾಗಿದ್ದೇವೆ. ಆದುದರಿಂದ ಜನರಿಗೆ ಅಧಿಕಾರ ಕೊಡಬೇಕೆನ್ನುವ ದೃಷ್ಟಿಯಿಂದ, ಗ್ರಾಮ ಪಂಚಾಯಿತಿಯ ಅಧ್ಯಕ್ಷ ಇರಲಿ, ಗ್ರಾಮ ಪಂಚಾಯಿತಿಯ P.D.O. ಇರಲಿ, ಗ್ರಾಮ ಪಂಚಾಯಿತಿಯ ಸದಸ್ಯ ಇರಲಿ, ಇವರು ಯಾರೇ ತಮ್ಮ ಜವಾಬ್ದಾರಿಯನ್ನು ಈ ಗ್ರಾಮ ಸಭೆ, ವಾರ್ಡ್ ಸಭೆ ಮಾಡುವುದಕ್ಕೆ ವಿಫಲರಾಗುತ್ತಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದಕ್ಕೆ ಎಲ್ಲಾ ರೀತಿಯಿಂದಲೂ ನಾವು ಬದ್ಧರಿದ್ದೇವೆ. ಆಮೇಲೆ ಅವರ ಏನೇನು ಸಲಹೆ ಇದ್ದವು, ಅವುಗಳನ್ನು ಒಪ್ಪಿ ತೆಗೆದುಕೊಂಡಿದ್ದೇವೆ ಆದಾಗ್ಯೂ ತಾವು ಇವತ್ತು ಸದನದ ಬಾವಿಗೆ ಬಂದಿರುವುದು,. ಇದು ಪಂಚಾಯತ್ ರಾಜ್ ವ್ಯವಸ್ಥೆಗೆ ಒಂದು ರೀತಿ ಮಾರಕವಾಗಿ ನಡೆದುಕೊಳ್ಳುತ್ತಿದ್ದೀರಿ. ಜನ ನಿಮ್ಮನ್ನು ನೋಡುತ್ತಿದ್ದಾರೆ.plt is not merely the Speaker, it is people whoi are looking at you.

(ಗೊಂದಲ)

ಅಧ್ಯಕ್ಷರು : ಇದು ದಾಖಲೆಗೆ ಹೋಗುವುದಿಲ್ಲ. ದಾಖಲೆಗೆ ಹೋಗುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಜನರು ನಿಮಗೆ ಪೆಟ್ಟನ್ನು ಕೊಡುತ್ತಾರೆನ್ನುವ ಮಾತನ್ನು ಹೇಳಿ ಇದನ್ನು ಪಾಸು ಮಾಡಿಕೊಡ ಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಧ್ಯಕ್ಷರೆ, ಇವತ್ತು ಈ ಬಿಲ್ ಅನ್ನು ಪಾಸ್ ಮಾಡಿಕೊಳ್ಳಲೇಬೇಕೆಂಬ ಹಠಕ್ಕೆ

ನಮ್ಮ ಪಂಚಾಯತ್‌ರಾಜ್ ಸಚಿವರು ಬಂದಿದ್ದಾರೆ. ಬೆಳಿಗ್ಗೆಯಿಂದ ಅವರನ್ನು ನಾನು ಗಮನಿಸುತ್ತಿದ್ದೇನೆ. ಅವರು ಇಲ್ಲಿ ಏನು ಹೇಳಿದರೆಂದರೆ, ಮತ ಕೊಟ್ಟಿರತಕ್ಕಂಥ ಜನತೆಗೆ ಅನ್ಯಾಯವಾಗಬಾರದು. ಆದ್ದರಿಂದ, ಜನತೆಯಿಂದ ಆಯ್ಕೆ ಆಗಿ ಬಂದಿರುವವರು ಸರಿಯಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಮತ್ತೊಂದು ಕಡೆ ನಮ್ಮ ಸಭಾನಾಯಕರು ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿ ದಲಿತ ವರ್ಗ, ಹಿಂದುಳಿದ ವರ್ಗದವರಿಗೆಲ್ಲ ರಕ್ಷಣೆ ಕೊಡುತ್ತೇವೆಂದು ಹೇಳಿದರು. ಆದರೆ, ಈ ಒಂದು ಬಿಲ್‌ನ್ನು ತಂದರೆ ಮೊದಲು ಯಾರಿಗೆ ಪೆಟ್ಟು ಬೀಳುತ್ತದೆ ಎಂದರೆ, ಸ್ವಾತಂತ್ರ ಬಂದು 67 ವರ್ಷಗಳಾದರೂ ಇನ್ನೂ ಶಿಕ್ಷಣ ಕೊಡುವುದಕ್ಕೆ ನಾವು ಎಡವಿದ್ದೇವೆ. ಇವತ್ತಿನ ದಿವಸ ಆ ಒಂದು ಮೀಸಲಾತಿ ವ್ಯವಸ್ಥೆಯಲ್ಲಿ ತಿಳಿವಳಿಕೆ ಇಲ್ಲದಂಥ ಸದಸ್ಯರು ಏನಿದ್ದಾರೆ, ಅವರನ್ನು ಆಯ್ಕೆ ಮಾಡತಕ್ಕಂಥ ಮೇಲ್ವರ್ಗದ ಬಲಾಢ್ಯ ಜನರು ಕೆಲವು ಕಡೆ ಕರೆದುಕೊಂಡು ಹೋಗಿ ನಿಲ್ಲಿಸುತ್ತಾರೆ. ಅವರ ಕೈಕೆಳಗಡೆ ಮತ್ತು ಅವರ ಸೂಚನೆ ಮೇರೆಗೆ ಇವರುಗಳು ಕೆಲಸ ಮಾಡುತ್ತಿದ್ದಾರೆ. ಇವತ್ತಿನ ದಿವಸ ತಿಳಿವಳಿಕೆ ಇಲ್ಲದಿರುವವರಿಂದ ಸಭೆಗಳು ಯಾವ ರೀತಿಯಾಗಿ ಆಗುತ್ತವೆ ಎಂಬ ಬಗ್ಗೆ ಮತ್ತು ಅವರ ಪಂಚಾಯಿತಿಯ ಸದಸ್ಯರುಗಳು ಸುಮಾರು 150 ಜನ ಬೆಂಗಳೂರಿಗೆ ಬಂದು ದಿನಗೂಲಿ ಕೆಲಸ ಮಾಡುತ್ತಿದ್ದಾರೆಂದು ಮಾನ್ಯ ಶಿವಲಿಂಗೇಗೌಡರು ಹೇಳಿದರು. ಇವತ್ತಿನ ದಿವಸ ಇಂಥ ಒಂದು ವ್ಯವಸ್ಥೆ ಇರುವಾಗ ಈ ರೀತಿಯಾದ ಸದಸ್ಯರನ್ನು disqualify ಮಾಡತಕ್ಕಂಥ ಒಂದು ಕಠಿಣವಾದಂಥ ನಿರ್ಧಾರವನ್ನು ಏತಕ್ಕೋಸ್ಕರ ತರುತ್ತಿದ್ದಾರೋ ಗೊತ್ತಿಲ್ಲ. ದಲಿತರು, ಹಿಂದುಳಿದ ವರ್ಗದವರಿಗೆ ರಕ್ಷಣೆ ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಭಾಷಣ ಮಾಡುತ್ತಾರೆ. ಅಲ್ಲಿ ಅಂಥ ಜನರನ್ನು disqualify ಮಡಿಸುವುದಕ್ಕೆ ಮುಂದಿನ ದಿನಗಳಲ್ಲಿ ಕಾರಣವಾಗತಕ್ಕಂಥದ್ದಕ್ಕೆ ಈಗ ತಂದಿರುವ ಬಿಲ್‌ಗೆ ನಮ್ಮ ಪಕ್ಷದ ಬೆಂಬಲ ಇಲ್ಲ. ಮಾನ್ಯ ಅಧ್ಯಕ್ಷರೆ, ಈ ಒಂದು ಮೀಸಲಾತಿಯ ವ್ಯವಸ್ಥೆಯಲ್ಲಿ ಬರತಕ್ಕಂಥ ಸದಸ್ಯರು ಯಾವ ರೀತಿ ಇದ್ದಾರೆಂಬುದನ್ನು ಬಹುಶಃ ತಾವೂ ಸಹ ನೋಡಿದ್ದೀರಿ. ಹಾಗೆಯೇ, ಇಲ್ಲಿರುವ ಮಾನ್ಯ ಸದಸ್ಯರೆಲ್ಲರೂ ಸಹ ನೋಡಿದ್ದಾರೆ. ತಿಳಿವಳಿಕೆ ಇಲ್ಲದೆ ಇರುವಂಥ ಆ ಒಂದು ಜನರನ್ನು ಮನೆಗೆ

ಕಳುಹಿಸುವುದಕ್ಕೆ ಇವತ್ತಿನ ದಿವಸ ಈ ಒಂದು ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕೆ ನಮ್ಮ ಸಹಮತ ಇಲ್ಲ.

ಬಹುಶ: ವಿದ್ಯೆ ಇಲ್ಲದವರಿಗೆ ಮತ್ತು ಆ ದಲಿತರನ್ನು ಮನೆಗೆ ಕಳುಹಿಸತಕ್ಕಂಥ ಈ ಒಂದು ವಿಧೇಯಕವನ್ನು ನಾವು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

ಅಧ್ಯಕ್ಷರು :– ಆಯಿತು.

(ಈ ಹಂತದಲ್ಲಿ ಜಾತ್ಯತೀತ ಜನತಾದಳ ಸದಸ್ಯರು ಸಭಾತ್ಯಾಗ ಮಾಡಿದರು)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನ ಬಾವಿಯಲ್ಲಿ ನಿಂತುಕೊಂಡು ಘೋಷಣೆ ಕೂಗುತ್ತಿದ್ದರು)

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2013

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2013 ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಮಾನ್ಯ ಸಚಿವರು ಖಂಡ 2 ಮತ್ತು 3ಕ್ಕೆ ತಿದ್ದುಪಡಿಯನ್ನು ತಂದಿರುವರು ಅವರು ತಿದ್ದುಪಡಿಯನ್ನು ಮಂಡಿಸಬೇಕು

ಖಂಡ – 2

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಅಧ್ಯಕ್ಷರೆ, ಖಂಡ 2 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಖಂಡ 2 ರಲ್ಲಿ ಪ್ರತಿಯೋಜಿಸಲು ಪ್ರಸ್ತಾಪಿಸಲಾದ 3ನೇ ಪ್ರಕರಣದ"

(i) (1) ನೇ ಉಪ ಪ್ರಕರಣದಲ್ಲಿ "ವಾರ್ಡ್ ಸಭೆಯ ಸಭೆಗಳನ್ನು ಕರೆಯತಕ್ಕದ್ದು" ಎಂಬ ಪದಗಳ ನಂತರ "ಸಂಬಂಧಪಟ್ಟ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ವಾರ್ಡ್ ಸಭೆಯ ಸಭೆಗಳನ್ನು ಕರೆಯುವುದಕ್ಕೆ ನೆರವು ನೀಡತಕ್ಕದ್ದು, ಒಂದು ವೇಳೆ ಆ ರೀತಿ ನೆರವು ನೀಡಲು ಪಂಚಾಯತ್ ಅದಿಕಾರಿಯು ವಿಫಲನಾದಲ್ಲಿ ಅಂಥ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು." ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (1ಬಿ) ಉಪ ಪ್ರಕರಣದಲ್ಲಿ "ವಾರ್ಡ್ ಸಭೆಯನ್ನು" ಎಂಬ ಪದಗಳಿಗೆ "ವಾರ್ಡ್ ಸಭೆಯ ಸಭೆಯನ್ನು ಸತತವಾಗಿ ಎರಡು ಬಾರಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಮಂಡಿಸಲಾಗಿದೆ, ಪ್ರಸ್ತಾವ ಏನೆಂದರೆ:

"ಖಂಡ 2 ರಲ್ಲಿ ಪ್ರತಿಯೋಜಿಸಲು ಪ್ರಸ್ತಾಪಿಸಲಾದ 3ನೇ ಪ್ರಕರಣದ

(i) (1) ನೇ ಉಪ ಪ್ರಕರಣದಲ್ಲಿ "ವಾರ್ಡ್ ಸಭೆಗಳನ್ನು ಕರೆಯತಕ್ಕದ್ದು" ಎಂಬ ಪದಗಳ ನಂತರ "ಸಂಬಂಧಪಟ್ಟ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ವಾರ್ಡ್ ಸಭೆಯ ಸಭೆಗಳನ್ನು ಕರೆಯುವುದಕ್ಕೆ ನೆರವು ನೀಡತಕ್ಕದ್ದು, ಒಂದು ವೇಳೆ ಆ ರೀತಿ ನೆರವು ನೀಡಲು ಪಂಚಾಯತ್ ಅಬಿವೃದ್ಧಿ ಅಧಿಕಾರಿಯು ವಿಫಲನಾದಲ್ಲಿ ಅಂಥ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು." ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (1ಬಿ) ಉಪ ಪ್ರಕರಣದಲ್ಲಿ "ವಾರ್ಡ್ ಸಭೆಯನ್ನು" ಎಂಬ ಪದಗಳಿಗೆ "ವಾರ್ಡ್ ಸಭೆಯ ಸಭೆಯನ್ನು ಸತತವಾಗಿ ಎರಡು ಬಾರಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಂಡಿಸಿದ ತಿದ್ದುಪಡಿಯ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ತಿದ್ದುಪಡಿ ಪ್ರಸ್ತಾವವು ಅಂಗೀಕರಿಸಲ್ಪಟ್ಟಿತ್ತು
ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ
ಅಧ್ಯಕ್ಷರು :– ಪ್ರಸ್ತಾವ ಏನೆಂದರೆ, "ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ತಿದ್ದುಪಡಿ ಪ್ರಸ್ತಾವವು ಅಂಗೀಕರಿಸಲ್ಪಟ್ಟಿತ್ತು
(ಪ್ರಸ್ತಾವ ಅಂಗೀಕರಿಸಲ್ಪಟ್ಟತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)
ಖಂಡ 3
ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಅಧಯಕ್ಷರೆ, ಖಂಡ 3 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.
"(i) (ii) ನೇ ಉಪ ಖಂಡದಲ್ಲಿ ಪ್ರತಿಯೋಜಿಸಲು (6) ನೇ ಉಪ ಪ್ರಕರಣದಲ್ಲಿ "ಗ್ರಾಮ ಸಭೆಯ ಸಭೆಯನ್ನು" ಎಂಬ ಪದಗಳ ನಂತರ "ಸತತವಾಗಿ ಎರಡು ಬಾರಿ ಕರೆಯಲು" ಎಂಬ ಪದಗಳನ್ನು ಸೇರಿಸತಕ್ಕದ್ದು.
(ii) (ii) ನೇ ಉಪಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–
"(iii) (8) ನೇ ಉಪ ಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–
"ಅಂಥ ಅಧಿಕಾರಿಯು ಹಾಗೆ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲನಾದಲ್ಲಿ ಅವನ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು."
ಅಧ್ಯಕ್ಷರು :– ಪ್ರಸ್ತಾವ ಮಂಡಿಸಲಾಯಿತು. ಪ್ರಸ್ತಾವ ಏನೆಂದರೆ,

"(i) (ii) ನೇ ಉಪ ಖಂಡದಲ್ಲಿ ಪ್ರತಿಯೋಜಿಸಲು ಪ್ರಸ್ತಾಪಿಸಲಾದ (6)ನೇ ಉಪ ಪ್ರಕರಣದಲ್ಲಿ "ಗ್ರಾಮ ಸಭೆಯ ಸಭೆಯನ್ನು" ಎಂಬ ಪದಗಳ ನಂತರ " ಸತತವಾಗಿ ಎರಡು ಬಾರಿ ಕರೆಯಲು " ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ii) ನೇ ಉಪಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(iii) (8)ನೇ ಉಪ ಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಂಥ ಅಧಿಕಾರಿಯು ಹಾಗೆ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲನಾದಲ್ಲಿ ಅವನ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು."

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಂಡಿಸಿದ ತಿದ್ದುಪಡಿಯ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ತಿದ್ದುಪಡಿ ಪ್ರಸ್ತಾವವು ಅಂಗೀಕರಿಸಲ್ಪಟ್ಟಿತ್ತು

ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ, "ಖಂಡ 3 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ತಿದ್ದುಪಡಿ ಪ್ರಸ್ತಾವವು ಅಂಗೀಕರಿಸಲ್ಪಟ್ಟಿತ್ತು

(ಪ್ರಸ್ತಾವ ಅಂಗೀಕರಿಸಲ್ಪಟ್ಟತು ಮತ್ತು ಖಂಡ 3 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4 ಮತ್ತು 5

ಅಧ್ಯಕ್ಷರು :– 4 ಮತ್ತು 5ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನುವುದು ಸಭೆಯ ಮುಂದಿರುವ ವಿಷಯ:

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 4 ಮತ್ತು 5 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು :– ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ.

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾದವು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು :– ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

ಪ್ರಸ್ತಾವದ ಅಂಗೀಕಾರ

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

2013 ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಅನುಮೋದನೆ ನೀಡಲಾಯಿತು)

(ಅನುಬಂಧ– 1)

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು.)

9. ನಿಯಮ 69ರ ಮೇಲಿನ ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಮತ್ತು ಉತ್ತರ

1. ವಿಷಯ :– ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಕುಸಿಯುತ್ತಿರುವ ಅಂತರ್ಜಲ ಹಾಗೂ